
ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜೂನ್ 2017 ಮಾಸ ಪತ್ರಿಕೆ

ಸಂಪುಟ : 39
ಸಂಚಿಕೆ : 9
ಪುಟ : 16
ಬೆಲೆ : ₹ 10/-




A Journal of Karnataka State Secondary Teachers' Association

# ಸಂಪಾದಕೀಯ

ಭಾರತ ಪ್ರಾಚೀನ ಕಾಲದಿಂದಲೂ ಗಣಿತ, ವಿಜ್ಞಾನ, ವೈದ್ಯಕೀಯ... ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಜಗತ್ತಿಗೆ ತನ್ನದೇ ಆದ ವಿಶಿಷ್ಟ ಕಾಣಿಕೆಗಳನ್ನು ನೀಡುತ್ತಾ ಬಂದಿದೆ. ಆದರೆ ವಿಜ್ಞಾನ ಸಾಧನೆ, ಸಂಶೋಧನೆ ಎಂದರೆ ಇತ್ತೀಚಿನ ಶತಮಾನಗಳಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳದ್ದು, ನಮ್ಮದೇನಿಲ್ಲ ಎಂಬ ಕೀಳರಿಮೆ ನಮ್ಮಲ್ಲಿ ಮೂಡಿಬಿಟ್ಟಿತ್ತು. ಅದರಲ್ಲೂ ಬಾಹ್ಯಾಕಾಶ ಕ್ಷೇತ್ರದಲ್ಲಿ ವಿದೇಶಿಯರ ಕೊಡುಗೆ ತುಂಬ ಹೆಚ್ಚಿನದು ಎಂಬ ಭಾವನೆ ಜನಮನದಲ್ಲಿ ನೆಲೆನಿಂತಿದೆ. ಆದರೆ ಭಾರತದ ಸಾಧನೆ ಕಡಿಮೆಯೇನಲ್ಲ. ಭಾರತೀಯ ವಿಜ್ಞಾನಿಗಳ ಸಾಧನೆ ಬಾಹ್ಯಾಕಾಶ ಕ್ಷೇತ್ರದಲ್ಲಿ ಎಲ್ಲರೂ ಆಶ್ಚರ್ಯ ಹಾಗೂ ಹೆಮ್ಮೆಪಡುವಂತಹುದಾಗಿದೆ. ಇದಕ್ಕೆ ಸಾಕ್ಷಿ ಜೂನ್ 6ರಂದು ಜಿಸ್‌ಎಲ್‌ವಿ ಮಾರ್ಕ್–3 ರಾಕೆಟನ್ನು ಅಭಿವೃದ್ಧಿಪಡಿಸಿ ಜಿ – ಸ್ಯಾಟ್ ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದ್ದು. ಈ ಸಾಧನೆಗಾಗಿ ಇಸ್ರೋ ವಿಜ್ಞಾನಿಗಳಿಗೆ ನಮ್ಮೆಲ್ಲರ ಹೃತ್ಪೂರ್ವಕ ಅಭಿನಂದನೆಗಳು. ಇಸ್ರೋ ಯೋಜಿಸಿರುವಂತೆ ಬಾಹ್ಯಾಕಾಶಕ್ಕೆ ಮಾನವನನ್ನು ಕಳುಹಿಸುವ ದಿನವೂ ದೂರವಿಲ್ಲ ಎಂಬ ವಿಶ್ವಾಸ ನಮ್ಮದು.

ವೃತ್ತಿಯಲ್ಲಿ ಎಲ್ಲವೂ ಸಮಾನವೇ. ಆದರೆ ವೈದ್ಯ ವೃತ್ತಿ ಮತ್ತು ಶಿಕ್ಷಕ ವೃತ್ತಿಗಳು ಪವಿತ್ರವಾದವು ಎಂಬುದರಲ್ಲಿ ಎರಡು ಮಾತಿಲ್ಲ. ವೈದ್ಯರು ಜೀವಗಳನ್ನು ಉಳಿಸುವ ಶ್ರೇಷ್ಠ ಕೆಲಸದಲ್ಲಿ ನಿರತರಾಗಿದ್ದರೆ, ವ್ಯಕ್ತಿಯನ್ನು ರೂಪಿಸುವ ಮಹತ್ವದ ಕಾರ್ಯವನ್ನು ಶಿಕ್ಷಕರು ನಿರ್ವಹಿಸುತ್ತಾರೆ. ಆದ್ದರಿಂದಲೇ ಸಮಾಜ ವೈದ್ಯರನ್ನು 'ವೈದ್ಯೋ ನಾರಾಯಣೋ ಹರಿಃ' ಎಂದರೆ ಪ್ರತಿದೇವರೇ ಎಂದು ಗೌರವಿಸುತ್ತದೆ. ಆದರೆ ಶಿಕ್ಷಕರಿಗೆ 'ಗುರು'ವಿನ ಸ್ಥಾನ ನೀಡಿ ಗುರುವನ್ನು "ಗುರುಬ್ರಹ್ಮ, ಗುರುರ್ವಿಷ್ಣು, ಗುರುರ್ದೇವೋ ಮಹೇಶ್ವರಃ" ಎಂದು ತ್ರಿಮೂರ್ತಿಗಳ ಸ್ಥಾನದಲ್ಲಿ ನಿಲ್ಲಿಸಿ ಗೌರವಿಸಿದೆ. ಜುಲೈ 1ರಂದು ರಾಷ್ಟ್ರೀಯ ವೈದ್ಯರ ದಿನ. ಜೀವ ರಕ್ಷಕರಾದ ವೈದ್ಯರನ್ನು ಪ್ರತಿದಿನವೂ ಸ್ಮರಿಸುವ ನಾವು ಅಂದು ವಿಶೇಷವಾಗಿ ವೈದ್ಯರನ್ನು ಅಭಿನಂದಿಸೋಣ. ವೈದ್ಯರು ತಮ್ಮ ಸೇವೆಯನ್ನು ನಿಷ್ಕಲ್ಮಷವಾಗಿ, ಹಣದ ವ್ಯಾಮೋಹಕ್ಕೆ ಒಳಗಾಗದೆ ನಿರ್ವಹಿಸುವಂತಾಗಲಿ ಎಂದು ಆಶಿಸೋಣ.

ಶ್ರೀಕೃಷ್ಣನು ಜಗದ್ಗುರುವಾದರೆ ಬ್ರಹ್ಮವಿದ್ಯಾ ಸಂಪ್ರದಾಯದ ಗುರುಪರಂಪರೆಗೆ ನಾಂದಿ ಹಾಕಿದವರು ಮಹರ್ಷಿ ವೇದವ್ಯಾಸರು. "ವ್ಯಾಸೋಚ್ಛಿಷ್ಠಂ ಜಗತ್ ಸರ್ವಂ" – ಜಗತ್ತಿನ ಜ್ಞಾನ ವಿಜ್ಞಾನ ಪರಂಪರೆಗಳಗೆಲ್ಲವೂ ವ್ಯಾಸರು ತಿಂದು ಬಿಟ್ಟದ್ದು. ವ್ಯಾಸರೇ ಗುರು ಎಂದರೆ ತಪ್ಪಲ್ಲ. ಆದ್ದರಿಂದಲೇ ವ್ಯಾಸರು ಗುರುಗಳಿಗೆಲ್ಲ ಪರಮಗುರುಗಳು. ಆಷಾಢ ಮಾಸದ ಹುಣ್ಣಿಮೆಯನ್ನು 'ವ್ಯಾಸಪೂರ್ಣಿಮೆ' ಅಥವಾ 'ಗುರುಪೂರ್ಣಿಮೆ'ಯಾಗಿ ಆಚರಿಸುವ ಮೂಲಕ ಮಹರ್ಷಿ ವ್ಯಾಸರನ್ನು ಹಾಗೂ ಎಲ್ಲಾ ಗುರುಗಳನ್ನೂ ಗೌರವಿಸಿ, ಪೂಜಿಸಲಾಗುತ್ತದೆ. ಹುಣ್ಣಿಮೆಯ ಚಂದ್ರ ಪೂರ್ಣ ಪ್ರಕಾಶ ಬೀರುತ್ತಾನೆ. ಅಂತೆಯೇ ಸದ್ಗುರುವೂ ಜ್ಞಾನಪ್ರಕಾಶವನ್ನು ಶಿಷ್ಯನಿಗೆ ನೀಡಿ ಸಮಗ್ರ ವ್ಯಕ್ತಿತ್ವವನ್ನು ರೂಪಿಸುತ್ತಾನೆ. ಸಮಾಜದ ಈ ಆಶಯಕ್ಕನುಗುಣವಾಗಿ, ಇದೇ ಜುಲೈ 9ರಂದು, 'ಗುರುಪೂರ್ಣಿಮೆ'ಯ ಸಂದರ್ಭದಲ್ಲಿ, ನಮ್ಮ ಪರಂಪರೆಯ ಶ್ರೇಷ್ಠ ಗುರುಗಳ ಸಾಧನೆಗಳನ್ನು ಆದರ್ಶವಾಗಿಟ್ಟುಕೊಂಡು ಶಿಕ್ಷಕರಾಗಿ ನಾವು ನಮ್ಮ ಕೆಲಸವನ್ನು ನಿರ್ವಹಿಸೋಣ. ಸಮಾಜಕ್ಕೆ ಉತ್ತಮ ನಾಗರಿಕರನ್ನು ರೂಪಿಸುವ ದೃಢ ನಿರ್ಧಾರವನ್ನು ಪ್ರತಿಯೊಬ್ಬ ಶಿಕ್ಷಕರೂ ಮಾಡೋಣ.

'ಮಾಸ್ತಿ ಕನ್ನಡ ಆಸ್ತಿ' ಎಂದೇ ಜನಪ್ರಿಯರು. "ಶ್ರೀನಿವಾಸ' ಕಾವ್ಯನಾಮದ ಮಾಸ್ತಿ ವೆಂಕಟೇಶ ಐಯ್ಯಂಗಾರ್ ಸಣ್ಣಕತೆಗಳ ಜನಕ, ಪಿತಾಮಹರೂ ಹೌದು. ಸರ್ಕಾರದ ಅಧಿಕಾರಿಯಾಗಿಯೂ ಮಾಸ್ತಿಯವರು ಉತ್ತಮ ಕೆಲಸಗಳನ್ನು ಮಾಡಿದ್ದಾರೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರೂ ಆದ ಮಾಸ್ತಿಯವರು ಜನಿಸಿದ್ದು ಜೂನ್ 6ರಂದು. ಮರಣಿಸಿದ್ದೂ ಜೂನ್ 6. ಗದ್ಯ ಸಾಹಿತ್ಯದ ಲೋಕದ ಮತ್ತೊಬ್ಬ ದಿಗ್ಗಜರು ಎ. ಎನ್. ಮೂರ್ತಿರಾವ್. ಗದ್ಯ ಸಾಹಿತ್ಯದಲ್ಲಿ ಮೂರ್ತಿರಾಯರ ಸಾಧನೆ ಗಮನಾರ್ಹ. ಅದರಲ್ಲೂ ಪ್ರಬಂಧ ರಚನೆಯಲ್ಲಿ ತಮ್ಮದೇ ಛಾಪು ಮೂಡಿಸಿದವರು. 1900 ಜೂನ್ 16ರಂದು ಮೂರ್ತಿರಾಯರ ಜನನ. ಅಪರೂಪದ ಸಾಹಿತಿ, ಹೃದಯವಂತ ಶಿಕ್ಷಕರು ತ.ಸು. ಶಾಮರಾಯರು. ಜೂನ್ 12 ತ.ಸು. ಶಾಮರಾಯರ ಜನ್ಮ ದಿನ. ಜೂನ್ ತಿಂಗಳಲ್ಲಿ ಜನಿಸಿರುವ ಕಾದಂಬರಿಕಾರ ನಿರಂಜನರು, ಸಿದ್ದಯ್ಯ ಪುರಾಣಿಕರು, ಜಯದೇವಿ ತಾಯಿ ಲಿಗಾಡೆ ಇವರುಗಳನ್ನು ಅವರ ಕೃತಿಗಳನ್ನು ಓದುವ ಮೂಲಕ ಸ್ಮರಿಸೋಣ.

ಕನ್ನಡ ಕಾದಂಬರಿ ಲೋಕದ ಧ್ರುವತಾರೆ ಬಿ. ವೆಂಕಟಾಚಾರ್ಯ. ಕನ್ನಡ ವಿದ್ವತ್ ಲೋಕದ ಖ್ಯಾತರಾದ ಫ. ಗು. ಹಳಕಟ್ಟಿ ಇವರುಗಳು ಮರಣಿಸಿದ್ದು ಜೂನ್ ತಿಂಗಳಲ್ಲಿ. ಇವರ ಕೃತಿಗಳ ಪರಿಚಯ ಮಾಡಿಕೊಂಡು ಅವರನ್ನು ಗೌರವಿಸೋಣ.

ಸಂಪಾದಕರು

## ಸೂಕ್ತಿ



ಊರ್ಧ್ವ ಬಾಹು ವಿಕಾಮ್ಯೇಷಾಂ
ನಚಕಚ್ಚಿತ್ ಶೃಣೋತಿಮೇ॥
ಧರ್ಮಾದರ್ಥಶ್ಚಕಾಮಶ್ಚ
ಸ ಕಿಮರ್ಥಂ ನ ಸೇವ್ಯತೇ? ॥

ಎರಡೂ ಕೈಯೆತ್ತಿ ನಾನು ಘೋಷಿಸುತ್ತಿದ್ದರೂ ನೀವೇಕೆ ಕೇಳುತ್ತಿಲ್ಲ? ಅರ್ಥ ಕಾಮಗಳನ್ನು ಧರ್ಮಾಧಾರಿತವಾಗಿ ಏಕೆ ಸೇವಿಸುತ್ತಿಲ್ಲ?

- ಮಹರ್ಷಿ ವೇದವ್ಯಾಸ

## ಪರಿವಿಡಿ


- ಮಾನವ ಸಂಪನ್ಮೂಲ ಸಚಿವರಿಗೆ ಎ.ಬಿಆರ್.ಎಸ್.ಎಂ ಮನವಿ 3
- ರಾಷ್ಟ್ರೀಯ ಕಾರ್ಯಕಾರಿಣಿ 6
- ಯೋಗದ ಮಹತ್ವ 7
- ಜೀವಂತ ದಂತಕಥೆ – ಬಿ.ಕೆ.ಎಸ್. ಅಯ್ಯಂಗಾರ್ 8
- ಸುಶಿಕ್ಷಿತ ಸುಸಂಸ್ಕೃತ ಮಕ್ಕಳೇ ನಾಳಿನ ಆಸ್ತಿ 9
- ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಧರಣಿ 11
- ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮತ್ತು ಕಾರ್ಯ – ಭಾಗ 7 15
- ಚಿತ್ರ ಸುದ್ದಿ 16

# ಮಾನವ ಸಂಪನ್ಮೂಲ ಸಚಿವರಿಗೆ ಎ.ಬಿ.ಆರ್.ಎಸ್.ಎಂ. ಸಲ್ಲಿಸಿದ ಮನವಿ

**ಸನ್ಮಾನ್ಯ ಶ್ರೀ ಪ್ರಕಾಶ್ ಜಾವಡೇಕರ್,**
ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು,
ಭಾರತ ಸರ್ಕಾರ, ಶಾಸ್ತ್ರಿ ಭವನ, ನವದೆಹಲಿ.

ಸನ್ಮಾನ್ಯರೇ,

ಶೈಕ್ಷಣಿಕ ಹಿತದೃಷ್ಟಿಯಿಂದ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾ ಸಂಘವು ಕೆಳಕಂಡ ವಿವಾದಾತ್ಮಕ ಸಂಗತಿಗಳನ್ನು ತಮ್ಮ ಅವಗಾಹನೆಗೆ ತರುತ್ತಿದ್ದು, ಅವುಗಳನ್ನು ಗೌರವಾನ್ವಿತ ಸಚಿವರಾದ ತಾವು ಪರಿಗಣಿಸಿ, ಸೂಕ್ತವಾದ ಕ್ರಮವನ್ನು ತೆಗೆದುಕೊಂಡು ಸಮಸ್ಯೆಗಳನ್ನು ಪರಿಹರಿಸುವಂತೆ ಕೋರುತ್ತದೆ.

1. **ಆರನೇ ವೇತನ ಆಯೋಗದಲ್ಲಿನ ಅಸಮಂಜಸತೆಗಳನ್ನು ನಿವಾರಿಸುವುದು:–** ಆರನೇ ವೇತನ ಆಯೋಗದ ಶಿಫಾರಸುಗಳು ದೇಶಾದ್ಯಂತ ಏಕರೂಪವಾಗಿ ಜಾರಿಗೆ ತರಬೇಕಾಗಿತ್ತು. ಆದರೆ ಕೆಲವು ರಾಜ್ಯಗಳಲ್ಲಿ ಈ ರೀತಿ ಜಾರಿಯಾಗಿಲ್ಲ. ಜಾರಿಗೊಂಡಿರುವ ಶಾಲೆ, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಲ್ಲಿ ಬಹಳಷ್ಟು ಅಸಂಗತತೆಗಳು ಗುರುತಿಸದೆ ಉಳಿದಿವೆ. ಪರಿಣಾಮವಾಗಿ ಕಿರಿಯ ಶಿಕ್ಷಕರು ಹಿರಿಯ ಶಿಕ್ಷಕರಿಗಿಂತ ಹೆಚ್ಚು ವೇತನಗಳನ್ನು ಪಡೆಯುವಂತಾಗಿದೆ. ಇದು ಬಹಳ ಮುಖ್ಯವಾದ ಅಂಶವಾಗಿದ್ದು ಈ ಅಸಂಗತತೆಗಳಿಂದಾಗಿ ಶಿಕ್ಷಕರು ಸಮರ್ಪಕವಾದ ವೇತನದ ಹೊಂದಾಣಿಕೆ ಪಡೆಯಲಾಗುವುದಿಲ್ಲ.
2. **7ನೇ ವೇತನ ಆಯೋಗದ ಶಿಫಾರಸ್ಸುಗಳನ್ನು ರಾಷ್ಟ್ರಾದ್ಯಂತ ಏಕರೂಪವಾಗಿ ಜಾರಿಗೆ ತರತಕ್ಕದ್ದು :** ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ವೇತನ ಆಯೋಗದ ಎಲ್ಲಾ ಶಿಫಾರಸುಗಳು ಭಾರತದ ಎಲ್ಲಾ ರಾಜ್ಯಗಳಲ್ಲಿ ಏಕರೂಪವಾಗಿ ಜಾರಿಗೊಳ್ಳುವುದನ್ನು ಖಚಿತ ಪಡಿಸಿಕೊಳ್ಳಬೇಕು. ಬೇರೆ ಬೇರೆ ರಾಜ್ಯಗಳಲ್ಲಿ ಶಿಕ್ಷಕರ ವೇತನ ಶ್ರೇಣಿಗಳು ಹಾಗೂ ಸೇವಾನಿಯಮಗಳಲ್ಲಿ ಅನೇಕ ವೈರುಧ್ಯತೆಗಳಿವೆ. 'ಸಮಾನ ಕೆಲಸಕ್ಕೆ ಸಮಾನ ವೇತನ' ತತ್ವದಂತೆ ದೇಶಾದ್ಯಂತ ಏಕರೂಪ ವೇತನ ಶ್ರೇಣಿಯನ್ನು ಜಾರಿಗೊಳಿಸುವುದು ಅಗತ್ಯವಿದೆ. ಈ ತತ್ವವನ್ನು ಎಲ್ಲಾ ರಾಜ್ಯಗಳೂ ಏಕರೂಪವಾಗಿ ಜಾರಿಗೊಳಿಸಲು ಕೇಂದ್ರ ಸರ್ಕಾರವು ರಾಜ್ಯಸರ್ಕಾರಗಳಿಗೆ ವಿಶೇಷ ಅನುದಾನ ನೀಡಲು ಅವಕಾಶ ಮಾಡಿಕೊಳ್ಳಬೇಕಾಗಬಹುದು.
3. **ಎಲ್ಲಾ ಶಾಲೆಗಳು, ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳಿಗೆ 2004ಕ್ಕಿಂತ ಹಿಂದೆ ಇದ್ದ ನಿವೃತ್ತಿ ಯೋಜನೆಯನ್ನು ಪುನರುಜ್ಜೀವಿಸಿ ವಿಸ್ತರಿಸಬೇಕು :** ಕಲ್ಯಾಣ ರಾಜ್ಯಗಳಿಗೆ ಹೊಸ ನಿವೃತ್ತಿ ಯೋಜನೆಯು ನಕಾರಾತ್ಮಕ ಹೆಜ್ಜೆ ಎಂದೇ ಪರಿಗಣಿಸಲಾಗಿದೆ. ಆದ್ದರಿಂದ ಶಿಕ್ಷಕರ ಕ್ಷೇಮಾಭಿವೃದ್ಧಿಯನ್ನು ಬೆಂಬಲಿಸಲು ಜನವರಿ 1, 2004ರ ನಿವೃತ್ತಿ ಯೋಜನೆಯನ್ನು ಎಲ್ಲಾ ಶಿಕ್ಷಕರಿಗೂ ಪುನರೂರ್ಜಿತಗೊಳಿಸತಕ್ಕದ್ದು.
4. **ನಿವೃತ್ತಿ ವಯಸ್ಸನ್ನು ದೇಶಾದ್ಯಂತ 65 ವರ್ಷಗಳಿಗೆ ನಿಗದಿಪಡಿಸುವುದು :** ನಮ್ಮ ರಾಷ್ಟ್ರದಲ್ಲಿ ಶಾಲೆ, ಕಾಲೇಜು ಮತ್ತು ವಿಶ್ವವಿದ್ಯಾನಿಲಯದ ಶಿಕ್ಷಕರ ನಿವೃತ್ತಿ ವಯಸ್ಸಿನಲ್ಲಿ ರಾಜ್ಯಗಳಲ್ಲಿ ವ್ಯತ್ಯಾಸವಿದೆ. ರಾಜಾಸ್ಥಾನದಲ್ಲಿ 60 ವರ್ಷಗಳಾದರೆ, ಕೇರಳದಲ್ಲಿ 55 ವರ್ಷಗಳು, ಒರಿಸ್ಸದಲ್ಲಿ 58 ವರ್ಷಗಳು, ಉತ್ತರ ಪ್ರದೇಶದಲ್ಲಿ 62, ಬಿಹಾರದಲ್ಲಿ 65 ವರ್ಷಗಳು ಹಾಗೂ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ 65 ವರ್ಷಗಳು, ಶಿಕ್ಷಕರ ಕೊರತೆಯನ್ನು ನಿವಾರಿಸಲು ಹಾಗೂ ಶಿಕ್ಷಕರ ಅನುಭವದ ಲಾಭವನ್ನು ಪಡೆಯಲು ಮತ್ತು ಶಿಕ್ಷಣ ಕ್ಷೇತ್ರವನ್ನು ಆಕರ್ಷಿತಗೊಳಿಸಲು ಶಿಕ್ಷಕರ ನಿವೃತ್ತಿ ವಯಸ್ಸನ್ನು ಏಕರೂಪವಾಗಿ ರಾಷ್ಟ್ರದ್ಯಂತ 65 ವರ್ಷಗಳಿಗೆ ನಿಗದಿಪಡಿಸುವುದು. ಜೀವನ ನಿರೀಕ್ಷೆಯ ಸುಸಂಗತೆಯ ಬೆಳಕಿನಲ್ಲಿ ಹಾಗೂ ಸೇವೆಗೆ ಸೇರುವ ವಯೋಮಿತಿ ಹೆಚ್ಚಳದ ಹಿನ್ನೆಲೆಯಲ್ಲಿ ಶಿಕ್ಷಕರ ನಿವೃತ್ತಿ ವಯಸ್ಸನ್ನು 65 ವರ್ಷಗಳಿಗೆ ನಿಗದಿಪಡಿಸುವುದು ನ್ಯಾಯಸಮ್ಮತವಾಗಿದೆ.
5. **ಖಾಯಂ ಬೋಧನಾ ಹುದ್ದೆಗಳ ನಿರಂತರ ಭರ್ತಿಯ ಖಾತ್ರಿಪಡಿಸಿಕೊಳ್ಳುವಿಕೆ ಹಾಗೂ ಶಿಕ್ಷಕರ ಸಮರ್ಥ ತರಬೇತಿ ಖಾತ್ರಿ :** ಕೇಂದ್ರ ಸರ್ಕಾರ ಮತ್ತು ರಾಜ್ಯಸರ್ಕಾರಗಳಲ್ಲಿ ಪ್ರಾಥಮಿಕ, ಪ್ರೌಢ, ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ಲಕ್ಷಾಂತರ ಹುದ್ದೆಗಳು ಭರ್ತಿಯಾಗದೆ ಉಳಿದಿವೆ. ಆರ್ಥಿಕ ಹೊರೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಸರ್ಕಾರಗಳು ವಿದ್ಯಾರ್ಥಿಮಿತ್ರ, ಸಮಾನ ಶಿಕ್ಷಕರು (Para Teachers), ಗುತ್ತಿಗೆ ಶಿಕ್ಷಕರು, ಅತಿಥಿ ಉಪನ್ಯಾಸಕರು, ಪ್ರಬೋಧಕ್, ಶಿಕ್ಷಕಮಿತ್ರ, ಅರೆಕಾಲಿಕ ಶಿಕ್ಷಕರು ಮುಂತಾದ ವ್ಯವಸ್ಥೆಗಳನ್ನು ಮಾಡುತ್ತಿದೆ. ಇದು ಶಿಕ್ಷಣದ ಗುಣಮಟ್ಟಕ್ಕೆ ತುಂಬಲಾರದ ನಷ್ಟವನ್ನುಂಟುಮಾಡುತ್ತಿದೆ. ಆದ್ದರಿಂದ ತಾತ್ಕಾಲಿಕ ವ್ಯವಸ್ಥೆಗೆ ಬದಲಾಗಿ ನಿರಂತರ ಮತ್ತು ಖಾಯಂ ಶಿಕ್ಷಕರ ನೇಮಕಾತಿಯ ಅಗತ್ಯವಿದೆ. ಎಲ್ಲಾ ಹಂತಗಳಲ್ಲೂ ಶಿಕ್ಷಣದ ಗುಣಾತ್ಮಕ ಸುಧಾರಣೆಗಾಗಿ ಶಿಕ್ಷಕರಿಗೆ ತರಬೇತಿಯ ವ್ಯವಸ್ಥೆ ಇರಬೇಕು. ತರಬೇತಿಗಳಿಗಿಂತ ಶಿಕ್ಷಕರು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಕೊಡುಗೆ ನೀಡುವಂತಿರಬೇಕು ಮತ್ತು ಅತ್ಯಾಧುನಿಕ ಜ್ಞಾನದಿಂದ ಶಿಕ್ಷಕರನ್ನು ಸಜ್ಜುಗೊಳಿಸಬೇಕು.

ಪುಟ 4 ಕ್ಕೆ ➤

➢ ಪುಟ 3 ರಿಂದ.....

6. **UGC ಶಿಫಾರಸಿನನ್ವಯ ಕಾಲೇಜುಗಳಲ್ಲಿ ವಿವಿಧ ಶಿಕ್ಷಕ ಹುದ್ದೆಗಳನ್ನು ದೇಶಾದ್ಯಂತ ಏಕರೀತಿಯಾಗಿ ಸಹಾಯಕ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರೆಂದು ಹೆಸರಿಸುವುದು** : ವಿವಿಧ ನಾಮಾಂಕಿತ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವ ರಾಷ್ಟ್ರದ ಎಲ್ಲಾ ಉನ್ನತ ಶಿಕ್ಷಣದ ಶಿಕ್ಷಕರುಗಳಲ್ಲಿ ಏಕತೆಯನ್ನು ತರುವ ಉದ್ದೇಶದಿಂದ UGC ಯು ಏಕರೂಪವಾಗಿ ರಾಷ್ಟ್ರಾದ್ಯಂತ ಶೈಕ್ಷಣಿಕ ಹುದ್ದೆಗಳನ್ನು ನಾಮಾಂಕಿತಗೊಳಿಸಲು ಶಿಫಾರಸು ಮಾಡಿದೆ. ಹುದ್ದೆಗಳ ಪುನರ್ನಾಮಕರಣವು ಸರ್ಕಾರಗಳಿಗೆ ಯಾವುದೇ ಆರ್ಥಿಕ ಹೊರೆ ನೀಡುವುದಿಲ್ಲ. ಶಿಕ್ಷಣದ ಗುಣಮಟ್ಟವನ್ನು ಉತ್ತಮಪಡಿಸಲು ನೆರವಾಗುತ್ತದೆ. ಅಧ್ಯಾಪಕ, ಸಹ ಪ್ರಾಧ್ಯಾಪಕರು ಮತ್ತು ಪ್ರಾಧ್ಯಾಪಕರೆಂಬ ಸ್ಥಾನ ನೀಡುವುದರಿಂದ ಶಿಕ್ಷಕರಲ್ಲಿ ಮಿಥ್ಯಾ ಭಾವನೆಯನ್ನು ಹೋಗಲಾಡಿಸಿ ರಾಷ್ಟ್ರಾದ್ಯಂತ ಏಕತೆಯನ್ನು ಸೃಷ್ಟಿಸುತ್ತದೆ.
7. **ವಿಶ್ವವಿದ್ಯಾನಿಲಯ ಮತ್ತು ಕಾಲೇಜು ಶಿಕ್ಷಕರಿಗೆ ವೃತ್ತಿ ಪ್ರಗತಿ ಯೋಜನೆ (CAS) ಯ ಲಾಭದ ಖಾತರಿ :** ಶೈಕ್ಷಣಿಕ ಸಾಮರ್ಥ್ಯ ಸೂಚಿಗಳ (A P I) (PBAS) ಮೂಲಕ ಸಾಮರ್ಥ್ಯ ಆಧಾರಿತ ಮೌಲ್ಯನಿರ್ಧಾರ (PBAS) (CAS) ನ ನಿಯಮಗಳನ್ನು ಪುನಃ ಪರಿಶೀಲಿಸಬೇಕಾಗಿದೆ. ಈ ಯೋಜನೆಯು ತರ್ಕಬದ್ಧವಾಗಿಲ್ಲ ಹಾಗೂ ಗೊಂದಲಮಯವಾಗಿರುವುದಕ್ಕೆ ಸಾಕ್ಷಿಯಾಗಿ ಯುಜಿಸಿಯೇ ಇದಕ್ಕೆ ನಾಲ್ಕು ಬಾರಿ ತಿದ್ದುಪಡಿ ತಂದಿದೆ. ಆದ್ದರಿಂದ ಈ ಯೋಜನೆಯನ್ನು ಕಾರ್ಯೋಪಯೋಗಿ ಮತ್ತು ಗುಣಾತ್ಮಕ ಯೋಜನೆ ಮೂಲಕ ಪರಿವರ್ತಿಸಬೇಕು.
8. **ಕಾಲೇಜುಗಳು, ವಿಶ್ವವಿದ್ಯಾಲಯಗಳಲ್ಲಿ ಪ್ರಾಂಶುಪಾಲರ ಅವಧಿಯನ್ನು 5 ವರ್ಷಗಳಿಗೆ ಸೀಮಿತಗೊಳಿಸದೆ ನಿವೃತ್ತಿಯ ವಯಸ್ಸಿನವರೆಗೆ ಮುಂದುವರೆಸುವುದು** : ಕಾಲೇಜುಗಳಲ್ಲಿ ಪ್ರಾಂಶುಪಾಲರ ಅವಧಿಯನ್ನು ಯುಜಿಸಿ 05 ವರ್ಷಗಳಿಗೆ ಸೀಮಿತಗೊಳಿಸಿದೆ. ಇದು ನ್ಯಾಯ ಸಮ್ಮತವೂ ಅಲ್ಲ, ತರ್ಕಬದ್ಧವೂ ಅಲ್ಲ. ಪ್ರಾಂಶುಪಾಲರ ಹುದ್ದೆಯು ಆಯ್ಕೆಯ ಹುದ್ದೆ ಮತ್ತು ಇದು ಹಿಂದಿನ ಹುದ್ದೆಯಾಗಿ ಉಳಿದಿರುವುದಿಲ್ಲ. 5 ವರ್ಷಗಳ ನಂತರ ಅವರ ಭವಿಷ್ಯ ಅನಿಶ್ಚಿತವಾಗುಳಿಯ ಬಾರದು. ಅದಕ್ಕಾಗಿ ಪ್ರಾಂಶುಪಾಲರ ಅವಧಿಯನ್ನು ನಿವೃತ್ತಿ ವಯಸ್ಸಿನವರೆಗೆ ಮುಂದುವರೆಸುವುದು ನ್ಯಾಯಸಮ್ಮತ ವಾಗುತ್ತದೆ.
9. **ಕಾರ್ಯನಿರತ ಶಿಕ್ಷಕರಿಗೆ Phd ಅಧ್ಯಯನದಿಂದ ವಿನಾಯಿತಿ:** ಕಾಲೇಜುಗಳು ಮತ್ತು ವಿಶ್ವವಿದ್ಯಾನಿಲಯಗಳ ಶಿಕ್ಷಕರಿಗೆ Phd ಅಧ್ಯಯನದಿಂದ ವಿನಾಯತಿ ನೀಡಬೇಕು ಅಥವಾ ಸಂಶೋಧನಾ ಕಾರ್ಯಕ್ಕೆ ಪ್ರೋತ್ಸಾಹಿಸುವ ಸಲುವಾಗಿ ಅವರಿಗೆ ವೇತನ ಸಹಿತ ರಜೆಯನ್ನು ಮಂಜೂರು ಮಾಡಬೇಕು.
10. **ಅನುದಾನಿತ ಶಾಲಾ ಕಾಲೇಜುಗಳ ಶಿಕ್ಷಕರಿಗೆ ಖಜಾನೆಯಿಂದ ವೇತನ ಪಾವತಿ ಸೌಲಭ್ಯ ಒದಗಿಸುವುದು** : ಅನುದಾನಿತ ಶಾಲಾ ಕಾಲೇಜುಗಳ ಶಿಕ್ಷಕರ ವೇತನ ಪಾವತಿಯಲ್ಲಿ ಅನೇಕ ಅಸಂಗತತೆಗಳಿವೆ. ಪರಿಣಾಮವಾಗಿ ಶಿಕ್ಷಣ ಸಂಸ್ಥೆಗಳಿಂದ ಶಿಕ್ಷಕರ ಶೋಷಣೆಗೆ ಕಾರಣವಾಗಿದೆ. ಶಿಕ್ಷಕರಿಗೆ ಪೂರ್ಣ ಹಾಗೂ ನಿಯಮಿತದ ವೇತನ ಪಾವತಿಗೆ ಖಜಾನೆ ಪಾವತಿ ಸೌಲಭ್ಯವು ಉತ್ತಮ ಆಯ್ಕೆಯಾಗಿರುತ್ತದೆ.
11. **ಶಾಲೆಗಳು ಕಾಲೇಜು ಮತ್ತು ವಿಶ್ವವಿದ್ಯಾಲಯಗಳ ಶಿಕ್ಷಕರಿಗೆ ಉಚಿತ ಆರೋಗ್ಯ ಕಾರ್ಡ್ ಸೌಲಭ್ಯವನ್ನು ಒದಗಿಸುವುದರ ಮೂಲಕ ಸೂಕ್ತ ವೈದ್ಯಕೀಯ ಚಿಕಿತ್ಸೆಯನ್ನು ನೀಡುವುದು ಹಾಗೂ ಅದರ ಸರಿಯಾದ ಕಾರ್ಯಗತಗೊಳಿಸುವಿಕೆಯನ್ನು ಖಚಿತ ಪಡಿಸುವುದು** : ಶಿಕ್ಷಕರಿಗೆ ಸೂಕ್ತ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದರಿಂದ ಅವರ ಸಾಮರ್ಥ್ಯವು ಹೆಚ್ಚಾಗುತ್ತದೆ. ಆದ್ದರಿಂದ ಸೂಕ್ತ ಹಾಗೂ ಕಾರ್ಯತಃ ಅನ್ವಯವಾಗುವಂತೆ ವೈದ್ಯಕೀಯ ಸೌಲಭ್ಯವನ್ನು ಎಲ್ಲಾ ಶಿಕ್ಷಕರಿಗೂ ನೀಡುವುದು.
12. **ವೃತ್ತಿ ಮುನ್ನಡೆಯಲ್ಲಿ ಹಿಂದಿನ ಸೇವೆಯನ್ನು ಪರಿಗಣಿಸುವುದು:** ಹಂಗಾಮಿ ಅಥವಾ ತಾತ್ಕಾಲಿಕ ಶಿಕ್ಷಕರಾಗಿ ಹಲವಾರು ವರ್ಷಗಳು ಸೇವೆ ಸಲ್ಲಿಸಿದ ಶಿಕ್ಷಕರ ಸಂಕಷ್ಟಗಳನ್ನು ಪರಿಹರಿಸುವ ಸಲುವಾಗಿ, ಆ ಶಿಕ್ಷಕರ ಹಿಂದಿನ ಸೇವೆಯನ್ನು ವೃತ್ತಿ ಮುನ್ನಡೆಗಾಗಿ ಪರಿಗಣಿಸುವುದು. ಇಂತಹ ಅವಕಾಶ ವನ್ನು ಯುಜಿಸಿ ನಿಯಮಾವಳಿಗಳಲ್ಲಿಯೇ ರೂಪಿಸುವುದು.
13. **ಶಿಕ್ಷಕರೊಂದಿಗೆ ಶಿಕ್ಷಣಕ್ಕೆ ಸಂಬಂಧಿಸಿದ ಇತರ ಸಿಬ್ಬಂದಿಗಳ ಸಾಮ್ಯತೆ** : ಕಾಲೇಜುಗಳ ಗ್ರಂಥಪಾಲಕರು ಮತ್ತು ದೈಹಿಕ ಶಿಕ್ಷಕರು, ಸಂಶೋಧನಾ ಸಹಾಯಕರು, ವಿಜ್ಞಾನ ಸಂಶೋಧಕರು, ತಂತ್ರ ವಿಶ್ಲೇಷಕರು, ತಂತ್ರ ವಿಧಿ ರಚಕರ (System programmers) ವೇತನ, ಸ್ವರೂಪ, ಸೇವಾ ನಿಯಮಾವಳಿಗಳು ಮತ್ತು ಬಡ್ತಿ ಅವಕಾಶಗಳು ಇತ್ಯಾದಿಗಳಿಗೆ ಸಂಬಂಧಿಸಿದಂತೆ ಶಿಕ್ಷಕರೊಂದಿಗೆ ಸಾಮ್ಯತೆ ಕಾಪಾಡಿ ಕೊಳ್ಳುವುದು.

## ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು

14. **ಈಗಿರುವ ಶಿಕ್ಷಣ ಪದ್ಧತಿಯನ್ನು ರಾಷ್ಟ್ರೀಯ ಅನನ್ಯತೆ, ಭಾರತೀಯ ಮೌಲ್ಯಗಳು, ವ್ಯಕ್ತಿ ಮತ್ತು ಶೀಲ ನಿರ್ಮಾಣ, ಸಾಮಾಜಿಕ ಕಾಳಜಿ, ಸ್ವಯಂ ಚಿಂತನೆ, ಸಂಶೋಧನೆ ಮತ್ತು ನಾವೀನ್ಯತೆಗಳನ್ನೊಳಗೊಂಡ ಅಂಶಗಳೊಂದಿಗೆ ಪುನರ್ನಿಗದಿಪಡಿಸುವುದು** : ಇಂದಿನ ಶಿಕ್ಷಣ ಪದ್ಧತಿಯು ವಿಚಾರಗಳ ಪ್ರಸಾರಕ್ಕೆ ಮಾತ್ರ ಸೀಮಿತವಾಗಿದೆ. ಶಿಕ್ಷಣದ ಮುಖ್ಯ ಗುರಿಯಾದ ವ್ಯಕ್ತಿ ಮತ್ತು ಶೀಲ ನಿರ್ಮಾಣವನ್ನು ನಿರ್ಲಕ್ಷಿಸಿರುವುದರಿಂದಾಗಿ ಶಿಕ್ಷಣವನ್ನು ಮಿತಿಗೊಳಿಸಲಾಗಿದೆ. ಶಿಕ್ಷಣವು ಕುತೂಹಲ ಮೂಡಿಸುವ, ಪರಿಶೀಲನೆಯ ಸಾಮರ್ಥ್ಯ, ವಿಮರ್ಶೆ, ದೂರದೃಷ್ಟಿ ಬೆಳೆಸುವ ಸಾಮರ್ಥ್ಯ, ಸ್ವಯಂಚಿಂತನೆ, ಕಾರ್ಯತತ್ಪರತೆ, ಸಂಶೋಧನೆ ನಾವೀನ್ಯತೆ, ರಾಷ್ಟ್ರೀಯ ಅನನ್ಯತೆಯನ್ನು ಬೆಳೆಸುವುದು, ಸಾಂಸ್ಕೃತಿಕ ಮೌಲ್ಯಗಳು ಹಾಗೂ ಸಾಮಾಜಿಕ ಕಾಳಜಿಗಳನ್ನು ಮೂಡಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದೆ. ವ್ಯಕ್ತಿ

ಪುಟ 5 ಕ್ಕೆ ➢

➢ ಪುಟ 4 ರಿಂದ.....

ನಿರ್ಮಿತ ಶಿಕ್ಷಣ ವ್ಯವಸ್ಥೆಗಾಗಿ ಶಿಕ್ಷಣದಲ್ಲಿ ರಾಷ್ಟ್ರೀಯ ಅನನ್ಯತೆ, ಭಾರತೀಯ ಮೌಲ್ಯಗಳು, ಸಾಮಾಜಿಕ ಕಾಳಜಿ, ಸ್ವಯಂ ಚಿಂತನೆ, ಸಂಶೋಧನೆ ಮತ್ತು ನಾವೀನ್ಯತೆಗಳನ್ನು ಅಳವಡಿಸಿ ಪುನರ್‌ರೂಪಿಸಬೇಕು.

15. **ರಾಷ್ಟ್ರೀಯ ಮತ್ತು ರಾಜ್ಯ ಮಟ್ಟಗಳಲ್ಲಿ ಶಿಕ್ಷಣತಜ್ಞರನ್ನು ಒಳಗೊಂಡ ಸ್ವಾಯತ್ತ ಮತ್ತು ಸ್ವತಂತ್ರ ನಿಯಂತ್ರಣ ಆಯೋಗ ರಚನೆಯ ಮೂಲಕ ಶಿಕ್ಷಣವ್ಯವಸ್ಥೆಯನ್ನು ನಿಯಂತ್ರಿಸುವುದು:** ಹಿಂದಿನ ವರ್ಷಗಳಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ನಾಯಿಕೊಡೆಗಳಂತಾಗಿವೆ. ದುರ್ಬಲ ಆಡಳಿತ ವ್ಯವಸ್ಥೆ ಮತ್ತು ನಿಯಮಗಳ ಅವಕಾಶವನ್ನು ಪಡೆದು ಅಸಂಖ್ಯಾತ ಶಾಲೆಗಳು ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಶಿಕ್ಷಣವನ್ನು ಸಂಪತ್ತು ಗಳಿಸುವ ಒಂದು ಒಳ್ಳೆಯ ವ್ಯಾಪಾರವನ್ನಾಗಿಸಿ ಕೊಂಡಿದೆ. ಈ ಶಿಕ್ಷಣ ಸಂಸ್ಥೆಗಳಿಗೆ ಶಿಕ್ಷಣದ ಬಗ್ಗೆ ಗಂಭೀರವಾಗಿ ಕಾಳಜಿ ಇರುವುದಿಲ್ಲ. ಪೋಷಕರು ಮತ್ತು ವಿದ್ಯಾರ್ಥಿಗಳು ಅಸಹಾಯಕರಾಗಿ ಯಾತನೆ ಪಡುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಅವುಗಳ ಆಡಳಿತ, ಶುಲ್ಕರೀತಿ, ಪಠ್ಯಕ್ರಮ ನಿರ್ಧಾರ, ಮೌಲ್ಯಮಾಪನ ವ್ಯವಸ್ಥೆ, ಶಿಕ್ಷಕರ ಆಯ್ಕೆ, ವೇತನ ಶ್ರೇಣಿ ಮುಂತಾದವು ಕೇಂದ್ರ ಇಲ್ಲವೆ ರಾಜ್ಯ ಸರ್ಕಾರಗಳ ನಿಯಂತ್ರಣದಲ್ಲಿರುತ್ತದೆ ಅಥವಾ ಖಾಸಗಿ ಆಡಳಿತದ ಪೂರ್ಣ ನಿಯಂತ್ರಣದಲ್ಲಿರುತ್ತದೆ. ಶಿಕ್ಷಣವನ್ನು ವಿನಾಶದಿಂದ ಪಾರು ಮಾಡಲು ಬುದ್ಧಿಜೀವಿಗಳನ್ನೊಳಗೊಂಡ ಸ್ವಾಯತ್ತ ಮತ್ತು ಸ್ವತಂತ್ರ ನಿಯಂತ್ರಣ ಆಯೋಗವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಹಂತದಲ್ಲಿ ಸ್ಥಾಪಿಸಿ ಇಡೀ ಶಿಕ್ಷಣ ವ್ಯವಸ್ಥೆಯನ್ನು ನಿಯಂತ್ರಿಸುವುದು.

16. **ಕೇಂದ್ರ ಸರ್ಕಾದ GDP ಯಲ್ಲಿ ಶೇಕಡ 10 ಮತ್ತು ರಾಜ್ಯ ಆಯವ್ಯಯದಲ್ಲಿ ಶೇಕಡ 30ನ್ನು ಮೂಲ ಸೌಕರ್ಯಗಳಾದ ಶಿಕ್ಷಕರು, ಗ್ರಂಥಗಳು, ಆಟದ ಮೈದಾನ, ಕಟ್ಟಡ ಮುಂತಾದವುಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲು ವೆಚ್ಚ ಮಾಡುವುದು:** ಸ್ವಾತಂತ್ರ್ಯ ಗಳಿಸಿ 70 ವರ್ಷಗಳ ನಂತರವೂ ಶಿಕ್ಷಣ ಕ್ಷೇತ್ರದಲ್ಲಿ ಸಾಕಷ್ಟು ಪ್ರಮಾಣದ ಶಿಕ್ಷಕರು, ಪುಸ್ತಕಗಳು, ಕಟ್ಟಡಗಳು, ಆಟದ ಮೈದಾನ ಮುಂತಾದವು ಲಭ್ಯ ವಿರುವುದಿಲ್ಲ. ಗೋಚರಿಸುವ ಆರ್ಥಿಕ ವ್ಯವಸ್ಥೆಯ ನಡುವೆಯೂ ಕೇಂದ್ರ ಮತ್ತು ರಾಜ್ಯಸರ್ಕಾರಗಳು GDP ಯಲ್ಲಿ ಶೇಕಡ 4ರಷ್ಟನ್ನು ಮಾತ್ರ ಶಿಕ್ಷಣಕ್ಕೆ ವೆಚ್ಚ ಮಾಡುತ್ತಿದೆ. ಇದು ಸಾವಿರಾರು ಜನರನ್ನು ಜ್ಞಾನಾರ್ಜನೆಯಿಂದ ವಂಚಿತರನ್ನಾಗಿಸುತ್ತದೆ ಮತ್ತು ನಾವೀನ್ಯತೆಯ ಕ್ಷೇತ್ರಗಳಲ್ಲಿ ಪ್ರತಿಕೂಲ ಪರಿಣಾಮ ಬೀರುತ್ತದೆ. ಶಿಕ್ಷಣದ ಗುಣಮಟ್ಟ ಕುಸಿಯುತ್ತಿದೆ ಹಾಗೂ ಪ್ರಪಂಚದಲ್ಲೇ ಶ್ರೇಷ್ಠ ಎಂದು ಪರಿಗಣಿಸಲ್ಪಟ್ಟಿದ್ದ ಭಾರತೀಯ ವಿದ್ಯಾರ್ಥಿ ಈಗ ಕಡೆಯ ಶ್ರೇಣಿಯಲ್ಲಿ ಗುರುತಿಸಲಾಗುತ್ತಿದೆ. ಸದ್ಯದ ಶಿಕ್ಷಣದ ಚಿತ್ರಣ ವನ್ನು ಉತ್ತಮಪಡಿಸಲು GDP ಯ ಶೇಕಡ 10ನ್ನು ಶಿಕ್ಷಣಕ್ಕೆ ವಿನಿಯೋಗಿಸಬೇಕು.

17. **ಶಿಕ್ಷಣ ಸ್ವಾಯತ್ತತೆಯನ್ನು ರಾಷ್ಟ್ರಾದ್ಯಂತ ಮರುಸ್ಥಾಪಿಸಬೇಕು ಹಾಗೂ ಶೈಕ್ಷಣಿಕ ವಿಚಾರಗಳ ನಿರ್ಧಾರದಲ್ಲಿ ಶಿಕ್ಷಕರ ಪಾಲ್ಗೊಳ್ಳುವಿಕೆಯನ್ನು ದೃಢಪಡಿಸಬೇಕು. ರಾಜಕೀಯ ಮತ್ತು ಆಡಳಿತಾತ್ಮಕ ಹಸ್ತಕ್ಷೇಪ ನಿಲ್ಲಬೇಕು:** – ಇಂದು ಶಿಕ್ಷಣ ಕ್ಷೇತ್ರದಲ್ಲಿ ರಾಜಕೀಯ ಮತ್ತು ಆಡಳಿತಾತ್ಮಕ ಹಸ್ತಕ್ಷೇಪ ಮಿತಿ ಮೀರಿದೆ. ಎಲ್ಲಾ ಶೈಕ್ಷಣಿಕ ನಿರ್ಧಾರಗಳಲ್ಲಿ ಇವರದೇ ಪೂರ್ಣ ಮೇಲುಗೈಯಾಗಿದೆ. ಪಠ್ಯ ಮತ್ತು ಪಠ್ಯ ವಸ್ತುಗಳು ಕೂಡ ಸರ್ಕಾರದಿಂದಲೇ ಆಯ್ಕೆಗೊಳ್ಳುತ್ತದೆ. ಶಿಕ್ಷಣದ ಸ್ವಾಯತ್ತತೆ ಯನ್ನು ಮರುಸ್ಥಾಪಿಸಲು ರಾಜಕೀಯ ಮತ್ತು ಆಡಳಿತಾತ್ಮಕ ಹಸ್ತಕ್ಷೇಪವನ್ನು ತಡಗಟ್ಟಬೇಕಾಗಿದೆ. ಎಲ್ಲಾ ಶೈಕ್ಷಣಿಕ ನಿರ್ಧಾರಗಳಲ್ಲೂ ಶಿಕ್ಷಕರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ದೃಢಪಡಿಸಿಕೊಳ್ಳಬೇಕು ಹಾಗೂ ಪ್ರಜಾಸತ್ತಾತ್ಮಕ ಮಾದರಿಯ ಶಿಕ್ಷಣ ವ್ಯವಸ್ಥೆಯನ್ನು ಒಪ್ಪಿಕೊಳ್ಳುವ ಅವಶ್ಯಕತೆ ಇದೆ.

18. **ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಖಾಯಿದೆಯನ್ನು ಸ್ಥಿರಗೊಳಿಸಲು ಮತ್ತು ಕ್ರಿಯಾಶೀಲವಾಗಲು ಮತ್ತು ಅದರ ಯಥಾರ್ಥವಾಗಿ ಕಾರ್ಯಗತಗೊಳಿಸಲು ಅಗತ್ಯವಾದ ಹಣ ಮತ್ತು ಸೌಲಭ್ಯಗಳನ್ನು ಒದಗಿಸುವುದು:** ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆಯನ್ನು ನಾವು ಸ್ವಾಗತಿಸುತ್ತೇವೆ. ಆದರೆ ಕಾಯಿದೆಯಲ್ಲಿನ ಕೆಲವು ನಿಬಂಧನೆಗಳನ್ನು ಪುನರ್ಪರಿಶೀಲಿಸುವ ಅವಶ್ಯಕತೆ ಇರುತ್ತದೆ ಮತ್ತು ಸ್ಥಿರಗೊಳಿಸ ಬೇಕು ಹಾಗೂ ಕಾರ್ಯತಃ ಅನ್ವಯವಾಗುವಂತಿರಬೇಕು. 8ನೇ ತರಗತಿಯವರೆಗೆ ಯಾವ ವಿದ್ಯಾರ್ಥಿಯನ್ನು ಅನುತ್ತೀರ್ಣವೆಂದು ಘೋಷಿಸಬಾರದೆಂಬ ನಿರ್ಧಾರ, ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನ ಪದ್ಧತಿಯಲ್ಲಿ ಶಿಕ್ಷಕರು ನಿಯಮಗಳನ್ನು ಪೂರೈಸುವುದು, ಮೂಲ ಸೌಕರ್ಯಗಳಲ್ಲಿನ ಹಲವಾರು ನಿರ್ಬಂಧಗಳನ್ನು ಸಮಗ್ರವಾಗಿ ಪರಿಗಣಿಸಬೇಕಾಗುತ್ತದೆ. ಈ ಕಾಯಿದೆಯು ಸ್ಥಿರವಾಗಿ ಮತ್ತು ಕಾರ್ಯತಃ ಅನ್ವಯುಗೊಳ್ಳಲು ಕಾಯಿದೆಯ ಕೆಲವು ಅಂಶಗಳನ್ನು ಪುನರ್ಪರಿಶೀಲಿಸಬೇಕಾಗಿದೆ.

19. **ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲೇ ನೀಡಬೇಕು:–** ಮಗು ತನ್ನ ಮಾತೃಭಾಷೆಯಲ್ಲಿ ಸುಲಭವಾಗಿ ಕಲಿಯುತ್ತದೆ ಮತ್ತು ಸೃಜನಾತ್ಮಕ ಕೌಶಲ್ಯವೂ ಅಭಿವೃದ್ಧಿಗೊಳ್ಳುತ್ತದೆ. ಆದ್ದರಿಂದ ಪ್ರಾಥಮಿಕ ಶಿಕ್ಷಣವನ್ನು ಮಾತೃಭಾಷೆಯಲ್ಲೇ ನೀಡುವುದು.

20. **ಶಿಕ್ಷಣದ ವ್ಯಾಪಾರೀಕರಣವನ್ನು ನಿಯಂತ್ರಿಸುವುದು :–** ಶಿಕ್ಷಣದ ವ್ಯಾಪಾರೀಕರಣದ ನಕಾರಾತ್ಮಕ ಪರಿಣಾಮಗಳನ್ನು ಇತ್ತೀಚಿನ ದಿನಗಳಲ್ಲಿ ಕಾಣುತ್ತಿದ್ದೇವೆ. ಶಿಕ್ಷಣ ಸಂಸ್ಥೆಗಳು ಇಂದು ವಾಸ್ತವವಾಗಿ ಅರ್ಹತಾಪತ್ರ ಮತ್ತು ಪದವಿಗಳನ್ನು ವಿತರಿಸುವ ಸಂಸ್ಥೆಗಳಾಗುತ್ತಿವೆ. ಇಂತಹ ಸಂಸ್ಥೆಗಳ ಶಾಸನ ಮತ್ತು ನಿಯಂತ್ರಣಕ್ಕಾಗಿ ವಿಚಾರವಂತರನ್ನೊಳಗೊಂಡ ಸ್ವತಂತ್ರ ಮತ್ತು ಸ್ವಾಯತ್ತ ನಿಯಂತ್ರಣ ಆಯೋಗವನ್ನು ರಚಿಸುವುದು.

**(ಜಗದೀಶ್ ಪ್ರಸಾದ್ ಸಿಂಘಾಲ್)**

**ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ**

**ನಿಮಗಾಗಿ ಏನನ್ನೂ ಬಯಸಬೇಡಿ. ಎಲ್ಲವನ್ನೂ ಇತರರಿಗಾಗಿ ಮಾಡಿ. – ಸ್ವಾಮಿ ವಿವೇಕಾನಂದ**

# ರಾಷ್ಟ್ರೀಯ ಕಾರ್ಯಕಾರಿಣಿ

ವರದಿ : **ಶ್ರೀಮತಿ ಮಮತಾ ಡಿ.ಕೆ.**
**ಕರ್ನಾಟಕ ರಾಜ್ಯ ಮಹಿಳಾ ಪ್ರಮುಖ್,**
**ಕ.ರಾ.ಮಾ.ಶಿ.ಸಂಘ, ಕನಕಪುರ,**
**ರಾಮನಗರ ಜಿಲ್ಲೆ.**



ದಿನಾಂಕ 27.05.17 ರಂದು ಹಿಮಾಚಲ ಪ್ರದೇಶದ ಸುಂದರ ತಾಣವಾದ ಶಿಮ್ಲಾದಲ್ಲಿ ಅಖಿಲ ಭಾರತೀಯ ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಕಾರ್ಯಕಾರಿಣಿ ಸೇರಿತ್ತು. ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿಗಳೂ ಹಾಗೂ ಪ್ರಸಕ್ತ ವಿರೋಧ ಪಕ್ಷದ ನಾಯಕರೂ ಆದ ಪ್ರೇಮ್‌ಕುಮಾರ್ ಧುಮಾಲ್‌ಜಿಯವರು, ಅಖಿಲ ಭಾರತೀಯ ಶೈಕ್ಷಿಕ ಮಹಾಸಂಘದ ರಾಷ್ಟ್ರೀಯ ಅಧ್ಯಕ್ಷರಾದ ವಿಮಲ್ ಪ್ರಸಾದ್ ಅಗರ್‌ವಾಲ್‌ರವರು, ರಾಷ್ಟ್ರೀಯ ಮಹಾಮಂತ್ರಿಗಳಾದ ಜೆ.ಪಿ.ಸಿಂಘಲ್‌ರವರು, ಹಾಗೂ ರಾಷ್ಟ್ರೀಯ ಸಂಘಟನಾ ಮಂತ್ರಿಗಳಾದ ಮಹೇಂದ್ರಕಪೂರ್‌ಜೀ ಉಪಸ್ಥಿತರಿದ್ದರು.

ಮಾನ್ಯ ಜೆ.ಪಿ.ಸಿಂಘಲ್‌ಜಿಯವರು ಅ.ಭಾ.ರಾ.ಶೈ.ಸಂಘದ ಕಿರು ಪರಿಚಯವನ್ನು ಸಭೆಗೆ ತಿಳಿಸುತ್ತಾ ಸಂಘದ ಮುಖ್ಯ ಕಾರ್ಯಕ್ರಮಗಳಾದ ಗುರುವಂದನಾ, ಕರ್ತವ್ಯಬೋಧ, ಶಾಶ್ವತ ಜೀವನ ಮೌಲ್ಯದ ವಿಚಾರಸಂಕಿರಣ, ಶಿಕ್ಷಕ ಸಮ್ಮಾನದಂತಹ ಕಾರ್ಯಗಳನ್ನು ಸಭೆಗೆ ತಿಳಿಸಿದರು.

ಉದ್ಘಾಟನಾ ಭಾಷಣ ಮಾಡಿದ ಶೈಕ್ಷಿಕ ಮಹಾಸಂಘದ ಮಾರ್ಗದರ್ಶಕರಾದ ಅನಿರುದ್ಧ ದೇಶಪಾಂಡೆಯವರು ಪಠ್ಯಕ್ರಮ ರಚನೆಯಲ್ಲಿ ಕರ್ತವ್ಯನಿರತ ಶಿಕ್ಷಕರ ಸ್ಥಾನಮಾನ ಕ್ಷೀಣಿಸುತ್ತಿರುವುದನ್ನು ಖಂಡಿಸುತ್ತಾ , ಪ್ರಾಥಮಿಕ ಶಿಕ್ಷಣ ಯಾವಾಗಲೂ ಮಾತೃಭಾಷೆಯಲ್ಲಿಯೇ ಇರಬೇಕು. ಶಿಕ್ಷಣದ ಖಾಸಗೀಕರಣವನ್ನು ತಡೆಯಬೇಕೆಂದು ಸಭೆಗೆ ತಿಳಿಸಿದರು.

ಹಿಮಾಚಲ ಪ್ರದೇಶದ ಮಾಜಿ ಮುಖ್ಯಮಂತ್ರಿಗಳಾದ ಪ್ರೇಮ್‌ಕುಮಾರ್ ಧುಮಾಲ್‌ಜಿಯವರು ಶಿಕ್ಷಣದ ಬಗ್ಗೆ ಮಾತನಾಡುತ್ತಾ ಮೆಕಾಲೆ ಭಾರತಕ್ಕೆ ಬಂದಾಗ ಅವನು ಇಡೀ ಭಾರತವನ್ನು ಪ್ರವಾಸ ಮಾಡಿದನು. ಇಲ್ಲಿಯ ಶಿಕ್ಷಣ ನೀತಿಯೇ ಭಾರತದಲ್ಲಿನ ಸಂಪದ್ಭರಿತತೆಗೆ, ಸಂಸ್ಕೃತಿಗೆ, ಸಂಸ್ಕಾರಕ್ಕೆ ಕಾರಣವೆಂದು ಅರ್ಥಮಾಡಿಕೊಂಡು ಇಡೀ ಶಿಕ್ಷಣ ಪದ್ಧತಿಯನ್ನು ಬುಡಮೇಲು ಮಾಡಿದರೆ ಮಾತ್ರ ಭಾರತವನ್ನು ಆಕ್ರಮಿಸ ಬಹುದೆಂದು ತಿಳಿದು ಮೆಕಾಲೆ ಶಿಕ್ಷಣ ಪದ್ಧತಿಯನ್ನು ಜಾರಿಗೆ ತಂದನು. ಇದರಿಂದಾಗಿ ಇಂದು ಉದ್ಯೋಗ ಬೇಡುವ ಶಿಕ್ಷಣವನ್ನು ನೀಡುತ್ತಿದ್ದೇವೆಯೇ ಹೊರತು ಉದ್ಯೋಗವನ್ನು ಸೃಷ್ಟಿಸುವ ಶಿಕ್ಷಣವನ್ನು ನೀಡುತ್ತಿಲ್ಲ. ಶಿಕ್ಷಣದ ರೀತಿ–ನೀತಿಯನ್ನು ಬದಲಾಯಿಸಬೇಕೆಂದರೆ ನಿಧಾನಿಸುವುದು ತರವಲ್ಲವೆಂದು ಹೇಳಿದರು. ಹಿಂದಿನ ಕಾಲದಲ್ಲಿ ಗುರು ಪದವಿ ಶ್ರೇಷ್ಠವಾಗಿತ್ತು. ಆದರೆ ಇಂದು ಯಾವುದೇ ಉದ್ಯೋಗ ಸಿಗದೇ ಇದ್ದ ಪರಿಸ್ಥಿತಿಯಲ್ಲಿ ಶಿಕ್ಷಕ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳುವವರ ಸಂಖ್ಯೆಯೇ ಜಾಸ್ತಿಯಾಗುತ್ತಿದೆ. ಇಂದು ಮಕ್ಕಳಿಗೆ ಪಠ್ಯಪುಸ್ತಕಗಳ ಭಾರ ಜಾಸ್ತಿಯಾಗುತ್ತಿದೆಯೇ ಹೊರತು ಜ್ಞಾನದ ಭಾರವಲ್ಲ. ಆದಷ್ಟು ಪಠ್ಯಪುಸ್ತಕಗಳ ಭಾರವನ್ನು ಕಡಿಮೆ ಮಾಡಬೇಕೆಂದು ಹೇಳುತ್ತಾ, ಶಿಕ್ಷಣದ quantity ಯನ್ನು ಹೆಚ್ಚು ಮಾಡದೇ quality ಗೆ ಮಹತ್ವ ನೀಡಬೇಕೆಂದು ತಿಳಿಸಿದರು.

ಉದ್ಘಾಟನಾ ಸಭೆಗೆ ವಂದಿಸುವ ಕಾರ್ಯವನ್ನು ರಾಷ್ಟ್ರೀಯ ಅಧ್ಯಕ್ಷರಾದ ವಿಮಲ್‌ಪ್ರಸಾದ್ ಅಗರ್‌ವಾಲ್‌ರವರು ಮಾಡಿದರು.

ಇದೇ ಸಂದರ್ಭದಲ್ಲಿ ದಿನಾಂಕ 26.5.17 ರಂದು ಮಾಧ್ಯಮಿಕ ಸಂವರ್ಗದ ಬೈಠಕ್ ಕೂಡ ನಡೆಯಿತು. ಅಲ್ಲಿ ಕನಿಷ್ಠ ಕಲಿಕೆಯ ಮಟ್ಟದ (Minimum learning level-MLL) ಬಗ್ಗೆ ಚರ್ಚಿಸಲಾಯಿತು. ವಿಷ್ಣು ಪ್ರಸಾದ್ ಚತುರ್ವೇದಿಯವರು ವಿಷಯ ಮಂಡನೆಯನ್ನು ಮಾಡಿದರು. ನಂತರ ಆ ವಿಷಯದ ಬಗ್ಗೆ ಸವಿಸ್ತಾರವಾಗಿ ಚರ್ಚಿಸಲಾಯಿತು. ಎರಡನೇ ಅವಧಿಯಲ್ಲಿ ಮಾಧ್ಯಮಿಕ ಶಿಕ್ಷಣದ ಸ್ಥಿತಿಯ ಬಗ್ಗೆ ವಿಷ್ಣು ಪ್ರಸಾದ್ ಚತುರ್ವೇದಿಯವರು ವಿಷಯ ಮಂಡನೆ ಮಾಡುತ್ತಾ PISA ಪರೀಕ್ಷೆಯಲ್ಲಿ ಭಾರತ ಹಿಂದುಳಿಯಲು ಕಾರಣ ಮತ್ತು ಅಂತಹ ಪರೀಕ್ಷೆಗಳನ್ನು ಎದುರಿಸಲು ಮಾಡಬೇಕಾದ ತಯಾರಿಗಳ ಬಗ್ಗೆ ಚಿಂತಿಸಲಾಯಿತು.

ದಿನಾಂಕ 27 ಮತ್ತು 28 ಮೇ 2017 ರಂದು ರಾಷ್ಟ್ರೀಯ ಕಾರ್ಯಕಾರಿಣಿಯ ಪೂರ್ಣ ಪ್ರಮಾಣದ ಸಭೆ ನಡೆಯಿತು. ಮೊದಲ ದಿನ ಎಲ್ಲ ರಾಜ್ಯಗಳಲ್ಲಿ ಸಂಘಟನೆಯ ವಿಸ್ತರಣೆಗಾಗಿ ನಡೆಯುತ್ತಿರುವ ಪ್ರಯತ್ನಗಳು ಹಾಗೂ ಅಖಿಲ ಭಾರತಸ್ತರದಲ್ಲಿ ನಡೆಯಬೇಕಾದ ಕಾರ್ಯಕ್ರಮಗಳ ವರದಿಯನ್ನು ಆಯಾ ರಾಜ್ಯಗಳ ಕಾರ್ಯದರ್ಶಿಗಳು ಮಂಡಿಸಿದರು.

ಒಂದು ಅವಧಿಯಲ್ಲಿ 7ನೇ ವೇತನ ಆಯೋಗದ ಬಗ್ಗೆ ವಿವರವಾಗಿ ಚರ್ಚಿಸಲಾಯಿತು. ಯಾವ ಯಾವ ರಾಜ್ಯಗಳು 7 ನೇ ವೇತನ ಆಯೋಗವನ್ನು ಜಾರಿಗೆ ತಂದಿವೆ ಎಂಬುದನ್ನು ತಿಳಿಸುತ್ತಾ ಯಾವ ಯಾವ ರಾಜ್ಯಗಳಲ್ಲಿ 7ನೇ ವೇತನ ಆಯೋಗ ಜಾರಿಗೆ ಬಂದಿಲ್ಲ, ಬಂದಿಲ್ಲದಿದ್ದರೆ ಕಾರಣಗಳೇನು ಎಂಬುದರ ಬಗ್ಗೆಯೂ ಚರ್ಚಿಸಲಾಯಿತು.

ಮತ್ತೊಂದು ಅವಧಿಯಲ್ಲಿ ಅನಿರುದ್ಧ ದೇಶಪಾಂಡೆಯರು Challenging the Nationality ಎಂಬ ವಿಷಯದ ಬಗ್ಗೆ ವಿಷಯ ಮಂಡನೆ ಮಾಡುತ್ತಾ ಈಗಿನ ಯುವಕರಲ್ಲಿ ರಾಷ್ಟ್ರೀಯ ಮನೋಭಾವನೆಯನ್ನು ಜಾಗೃತಗೊಳಿಸಲು ಕೈಗೊಳ್ಳಬೇಕಾದ ನಡೆಯ ಬಗ್ಗೆ ಚರ್ಚೆ ನಡೆಸಿದರು.

ಈ ರಾಷ್ಟ್ರೀಯ ಕಾರ್ಯಕಾರಿಣಿಯ ಮತ್ತೊಂದು ಅವಧಿಯಲ್ಲಿ ಉಚ್ಚ, ಮಾಧ್ಯಮಿಕ ಮತ್ತು ಪ್ರಾಥಮಿಕ ಸಂವರ್ಗಗಳನ್ನು ವಿಂಗಡಿಸಿ ಕಾರ್ಯಕರ್ತರ ಸಮಸ್ಯೆಗಳನ್ನು ಆಲಿಸಿ, ಸಮಾಧಾನ ಹೇಳುವಲ್ಲಿಯೂ ಸಹ ಹಿರಿಯರು ಯಶಸ್ವಿಯಾದರು.

ಕಾರ್ಯಕಾರಿಣಿ ಸಭೆಯಲ್ಲಿ 17 ರಾಜ್ಯಗಳ 120ಕ್ಕೂ ಹೆಚ್ಚು ಕಾರ್ಯಕರ್ತರು ಭಾಗವಹಿಸಿದ್ದರು. ಕರ್ನಾಟಕದ ತಂಡದಲ್ಲಿ ಮಾಧ್ಯಮಿಕ ಮಹಿಳಾ ಹಾಗೂ ಉಚ್ಚ ಶಿಕ್ಷಣ ಸಂವರ್ಗಗಳಿಂದ ಸೇರಿ 9 ಜನ ಭಾಗವಹಿಸಿದ್ದರು. ದಿನಾಂಕ 28.5.2017ರಂದು ಸಮಾರೋಪ ಸಮಾರಂಭದೊಂದಿಗೆ ಸಭೆಯು ಮುಕ್ತಾಯವಾಯಿತು. ●

**ನಿಮ್ಮನ್ನು ನೀವು ಜಯಿಸಿ, ಆಗ ಇಡೀ ಜಗತ್ತೇ ನಿಮ್ಮದಾಗುತ್ತದೆ. – ಸ್ವಾಮಿ ವಿವೇಕಾನಂದ**

### ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ

# ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಧರಣಿ

## ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ

ದಿನಾಂಕ 10.6.2017ರಂದು ಸಭೆ ಸೇರಿದ್ದ ಮಾಧ್ಯಮಿಕ ಶಿಕ್ಷಕ ಸಂಘದ ಕೇಂದ್ರ ಪದಾಧಿಕಾರಿಗಳು ಪಠ್ಯ ಪುಸ್ತಕಗಳ ದೋಷಗಳು, ವಿತರಣೆಯಲ್ಲಿನ ಲೋಪ ಹಾಗೂ ಇನ್ನಿತರ ಬೇಡಿಕೆಗಳನ್ನು ಪೂರೈಸಲು ಮುಖ್ಯ ಮಂತ್ರಿಗಳನ್ನು ಆಗ್ರಹಿಸುವಂತೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ಧರಣೆಯನ್ನು ನಡೆಸಿ ಶಿಕ್ಷಕರು ಮನವಿ ಪತ್ರವನ್ನು ಜಿಲ್ಲಾಧಿಕಾರಿಗಳ ಮೂಲಕ ಮುಖ್ಯಮಂತ್ರಿಗಳಿಗೆ ಕಳಿಸಬೇಕೆಂದು ಕರೆ ನೀಡಿದ್ದರು.

ಈ ಕರೆಗೆ ಅನುಗುಣವಾಗಿ ರಾಜ್ಯದ 20 ಜಿಲ್ಲೆಗಳಲ್ಲಿ ನಮ್ಮ ಸಂಘದ ಪದಾಧಿಕಾರಿಗಳು ಅನೇಕ ಶಿಕ್ಷಕರ ಜೊತೆಯಲ್ಲಿ 2 ಗಂಟೆಗಳ ಕಾಲ ಸತತ ಧರಣಿ ನಡೆಸಿ, ಜಿಲ್ಲಾಧಿಕಾರಿಗಳಿಗೆ ಮನವಿಯನ್ನು ಸಲ್ಲಿಸಿದರು.  ಈ ಧರಣಿಯ ವಿವರಗಳನ್ನು ಮುಂದಿನ ಪುಟಗಳಲ್ಲಿ ಓದುವಿರಿ.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಪಠ್ಯಪುಸ್ತಕಗಳ ದೋಷ ನಿವಾರಣೆ ಹಾಗೂ ವಿವಿಧ ಬೇಡಿಕೆಗಳನ್ನೊಳಗೊಂಡ ಮನವಿಯನ್ನು, ಮಾನ್ಯ ಶಾಸಕ ಶ್ರೀ ಅರುಣ್ ಶಹಾಪೂರ ಅವರ ನೇತೃತ್ವದಲ್ಲಿ ದಿನಾಂಕ 14.6.2017 ರಂದು ಮಾನ್ಯ ಶಿಕ್ಷಣ ಸಚಿವರ ಮೂಲಕ ಮುಖ್ಯ ಮಂತ್ರಿಗಳಿಗೆ ಮನವಿ ಸಲ್ಲಿಸಿದರು.



## –: ಬೇಡಿಕೆಗಳು :–

1. ಪಠ್ಯ ಪುಸ್ತಕದಲ್ಲಿನ ತಪ್ಪುಗಳಿಂದಾಗಿ ಶಿಕ್ಷಕರಲ್ಲಿ ಉಂಟಾದ ಗೊಂದಲ ನಿವಾರಣೆ.
2. ಇನ್ನೂ ಪಠ್ಯಪುಸ್ತಕಗಳು ವಿತರಣೆಯಾಗದಿರುವ ಸ್ಥಳಗಳಲ್ಲಿ ಕೂಡಲೇ ವಿತರಿಸುವಂತೆ ಆಗ್ರಹ.
3. ಸರಿಯಾಗಿ ಮುದ್ರಿತವಾಗದಿರುವ ಪುಸ್ತಕಗಳನ್ನು ಕೂಡಲೇ ಹಿಂಪಡೆಯುವಂತೆ ಆಗ್ರಹ.
4. ಪ್ರೌಢಶಾಲಾ ಶಿಕ್ಷಕರಿಗೆ, ಪದವಿ ಪೂರ್ವ ಕಾಲೇಜುಗಳಿಗೆ ಬಡ್ತಿ ನೀಡುವಂತೆ ಆಗ್ರಹ.
5. ಒಂದೇ ದೇಶ, ಒಂದೇ ಶಿಕ್ಷಣ ನೀತಿ ಹಾಗೂ ಒಂದೇ ವೇತನ ಶ್ರೇಣಿ. ಈ ಕೋರಿಕೆಗಾಗಿ ಕೇಂದ್ರ ಸರ್ಕಾರದ ಏಳನೇ ವೇತನ ಆಯೋಗ ವರದಿಯನ್ನು ರಾಜ್ಯದಲ್ಲೂ ಯಥಾವತ್ತಾಗಿ ಜಾರಿಮಾಡಲು ಒತ್ತಾಯ.
6. ಸಮಾನ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರೌಢಶಾಲಾ ಶಿಕ್ಷಕರು/ ಮುಖ್ಯ ಶಿಕ್ಷಕರು ಹಾಗೂ ಟಿ.ಜೆ.ಟಿ. ಶಿಕ್ಷಕರಿಗೆ ಒಂದು ವಿಶೇಷ ವೇತನ ಮಂಜೂರಾತಿಯಲ್ಲಿ ಗೊಂದಲ ನಿವಾರಣೆ.

ಈ ಎಲ್ಲಾ ಬೇಡಿಕೆಗಳನ್ನೊಳಗೊಂಡ ಮನವಿಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವಿವಿಧ ತಾಲ್ಲೂಕು ಹಾಗೂ ಜಿಲ್ಲಾ ಘಟಕಗಳ ಪದಾಧಿಕಾರಿಗಳು ಸಾಂಕೇತಿಕ ಧರಣಿ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ಮಾನ್ಯ ಮುಖ್ಯಮಂತ್ರಿಗಳಿಗೆ ಮನವಿಯನ್ನು ಸಲ್ಲಿಸಿದರು.



# ರಾಜ್ಯದ ವಿವಿಧೆಡೆ ನಡೆದ ಧರಣಿಯ ಚಿತ್ರಗಳು


ಚಾಮರಾಜನಗರ


ಮಂಡ್ಯ



ಬೆಳಗಾವಿ


ರಾಮನಗರ


ಯಾದಗಿರಿ


ಬಾಗಲಕೋಟೆ



ನಿಪ್ಪಾಣಿ


ಬಳ್ಳಾರಿ

# ರಾಜ್ಯದ ವಿವಿಧೆಡೆ ನಡೆದ ಧರಣಿಯ ಚಿತ್ರಗಳು



ಹುಬ್ಬಳ್ಳಿ–ಧಾರವಾಡ



ಚಿಕ್ಕೋಡಿ

# ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ವಿವಿಧ ಬೇಡಿಕೆಗಳನ್ನು ಈಡೇರಿಸಲು ನಡೆದ ಧರಣಿಗೆ ಮಾಧ್ಯಮಗಳ ಸ್ಪಂದನೆ

## ಪದವಿಪೂರ್ವ ಕಾಲೇಜ್‌ಗೆ ಬಡ್ತಿ ನೀಡಲು ಮುಖ್ಯಮಂತ್ರಿಗೆ ಮನವಿ

» ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದಿಂದ ಜಿಲ್ಲಾಡಳಿತದ ಮೂಲಕ ರವಾನೆ

■ ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ಪದವಿಪೂರ್ವ ಕಾಲೇಜ್‌ಗೆ ಬಡ್ತಿ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ವತಿಯಿಂದ ಜಿಲ್ಲಾಡಳಿತದ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಪತ್ರ ರವಾನಿಸಲಾಯಿತು. ಅರ್ಹ ಪ್ರೌಢ ಶಾಲಾ ಶಿಕ್ಷಕರಿಗೆ ಪದವಿ ಪೂರ್ವ ಕಾಲೇಜ್‌ಗೆ ಬಡ್ತಿ ನೀಡಬೇಕು. ಕೇಂದ್ರ ಸರ್ಕಾರದ 7ನೇ ವೇತನ ಆಯೋಗ ಯಥಾವತ್ತಾಗಿ ಜಾರಿ ಮಾಡಬೇಕು. ಇತರೆ ಸಮಾನ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರೌಢಶಾಲಾ ಶಿಕ್ಷಕರು/ಮುಖ್ಯ ಶಿಕ್ಷಕರು ಹಾಗೂ ಟಿ.ಜಿ.ಟಿ ಶಿಕ್ಷಕರಿಗೆ ಒಂದು ವಿಶೇಷ ವೇತನ ಮಂಜೂರಾತಿಯಲ್ಲಿಯ ಗೊಂದಲ ಪರಿಹಾರ ಮಾಡಬೇಕು ಎಂಬಿತ್ಯಾದಿ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಲಾಗಿದೆ. ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಸಂದೀಪ ಬೂದಿಹಾಳ, ಜಿಲ್ಲಾಧ್ಯಕ್ಷ ಶ್ರೀಧರ ಪಾಟೀಲ ಕುಲಕರ್ಣಿ, ಶಿವಾನಂದ ನಾಗೂರ, ಬಸವರಾಜ ದೇವರಮನಿ, ಅಶೋಕ ಗಡಾದ, ಯಶೋಧಾ ತಾಂಬೆ, ಎನ್. ಡಿ. ಹಾದಿಮನಿ, ಬಸವರಾಜ ಮಾದರ, ಸಿ.ಬಿ. ಗಾವರವಾಡ, ವಿಜೇಂದ್ರ ಹಿರೇಗೌಡ, ಎನ್.ಎಸ್. ಆಡಿನ್ ಮತ್ತಿತರರು ಮನವಿ ಸಲ್ಲಿಕೆ ಸಂದರ್ಭದಲ್ಲಿ ಇದ್ದರು.



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ



ಪಠ್ಯಪುಸ್ತಕಗಳಲ್ಲಿ ದೋಷ: ಹಳೆಯ ಕ್ರಮ ಮುಂದುವರಿಕೆಗೆ ಸಲಹೆ

ಶಿಕ್ಷಕರ ಬೇಡಿಕೆ ಡಿಸಿಗೆ ಮನವಿ




ಮಹದೇವ.ಮಾ. ಜಗತಾಪ
ಗುಳೇದ ಗುಡ್ಡ

**ಮನುಷ್ಯಾನಾಂ ಸಹಸ್ರೇಷು ಕಶ್ಚಿದ್ಯತತಿ ಸಿದ್ದಯೇ।**
**ಯತತಾಮಪಿ ಸಿದ್ಧಾನಾಂ ಕಶ್ಚಿನ್ಮಾಂ ವೇತ್ತಿ ತತ್ವತಃ॥**

**(ಭಗವದ್ಗೀತೆ 6.2)**

"ಅನೇಕ ಸಹಸ್ರವಮಾನದಲ್ಲಿ ಯಾವನೋ ಒಬ್ಬನು ಜ್ಞಾನಸಿದ್ಧಿಗಾಗಿ ಪ್ರಯತ್ನಿಸುತ್ತಾನೆ; ಹೀಗೆ ಪ್ರಯತ್ನ ಮಾಡುವ ಅನೇಕ ಸಹಸ್ರ ಸಾಧಕರಲ್ಲಿ ತನ್ನ ಸ್ವರೂಪವನ್ನು ಯಥಾರ್ಥವಾಗಿ ತಿಳಿಯುವವನು ಯಾವನೋ ಒಬ್ಬನು."

ಅಂತಹ ವ್ಯಕ್ತಿಗಳಿಂದ ಜ್ಞಾನ ಪಡೆದು ಅದನ್ನು ಪಸರಿಸಿ ಮನುಕುಲ ಸದಾ ಸುಖ ಶಾಂತಿಯಿಂದಿರಲು ಪ್ರಯತ್ನಿಸುವುದೇ ಯೋಗ ಶಿಕ್ಷಣದ ಮುಖ್ಯ ಉದ್ದೇಶವಾಗಿದೆ. ಯೋಗವು ಯಾವುದೇ ಒಂದು ಪಂಥದವರಿಗೆ ಸೀಮಿತವಾದುದ್ದಲ್ಲ. ಗಾಳಿ, ಬೆಳಕು, ನೀರಿನಂತೆ ಎಲ್ಲರಿಗೂ ಅವಶ್ಯವಾದುದು.

"ಶರೀರ ಮಾಧ್ಯಂ ಖಲು ಧರ್ಮ ಸಾಧನಂ" ಎನ್ನುವ ಹಾಗೆ ಯೋಗ ಸಾಧನೆಯಿಂದ ಮೈಮನಗಳೆರಡೂ ವಿಕಾಸ ವಾಗುತ್ತವೆ.

ಯೋಗ ಎಂಬ ಶಬ್ದವು ಸಂಸ್ಕೃತ 'ಯುಜ್' ಎಂಬ ಧಾತುವಿನಿಂದ ಬಂದಿದೆ. ಯುಜ್ ಎಂದರೆ ಕೂಡು ಎಂದರ್ಥ, ಈ ಮೂಲಕ ದೇಹ ಮತ್ತು ಮನಸ್ಸನ್ನು ಒಂದು ಗೂಡಿಸುತ್ತೇವೆ, ದೇಹ ಹಾಗೂ ಮನಸ್ಸಿನ ಮೇಲೆ ನಿಯಂತ್ರಣ ಸಾಧಿಸುವುದೇ ಯೋಗ. ಯೋಗವೆಂದರೆ ಕೇವಲ ಮೈ ಮಣಿಸುವುದು ; ಪ್ರಾಣಾಯಾಮ ಎಂದರೆ ಪ್ರಾಣವಾಯುವನ್ನು ತೆಗೆದು ಕೊಳ್ಳುವುದು ಎಂದು ತಿಳಿಯದೇ ಇದು ವೈದ್ಯಕೀಯ ಮತ್ತು ಮನಃಶ್ಶಾಸ್ತ್ರಕ್ಕೆ ಸಂಬಂಧಿಸಿದ ಶಾಸ್ತ್ರವಾಗಿದೆ ಎಂದು ಮನಗಾಣಬೇಕು.

ಸುಖಸ್ಯ ಮೂಲಂ ಧರ್ಮಃ. ಯೋಗವು ಸಮಸ್ತ ಧರ್ಮದ ಸಾರವಾಗಿದ್ದು, ಯೋಗಾಭ್ಯಾಸದಿಂದ ಧರ್ಮಪ್ರಜ್ಞೆಯೂ ಜಾಗೃತವಾಗಿ ಆ ಮೂಲಕ ಸುಖ-ಆರೋಗ್ಯ ನೆಮ್ಮದಿಯನ್ನು ಕಾಣಬಹುದು. ಯೋಗ ದುಃಖವನ್ನು ಹೇಗೆ ನಾಶ ಮಾಡುತ್ತದೆ?

**ಯುಕ್ತಾಹಾರ ವಿಹಾರಸ್ಯ ಯುಕ್ತ ಚೇಷ್ಟಸ್ಯ ಕರ್ಮಸು।**
**ಯುಕ್ತ ಸ್ವಪ್ನಾವ ಬೋಧಸ್ಯ ಯೋಗೋ ಭವತಿ ದುಃಖಹಾ॥**

**ಶ್ರೀ ಮದ್ಭಗವದ್ಗೀತಾ**

ಯೋಗವು ಪರಿಪೂರ್ಣ ಶಿಸ್ತಾಗಿದ್ದು, ಯೋಗಾಭ್ಯಾಸದಿಂದ ಆಹಾರ, ವಿಹಾರ, ಕರ್ಮ, ಸ್ವಪ್ನ, ಜಾಗೃತಿಗಳಲ್ಲಿ ಪರಿಪೂರ್ಣ ಶಿಸ್ತು-ವೃದ್ಧಿಯಾಗಿ ಆ ಮೂಲಕ ನಮ್ಮ ದುಃಖ ನಾಶವಾಗುತ್ತದೆ.

ದಾಂಪತ್ಯ ಜೀವನದಲ್ಲೂ ನಿತ್ಯ ಸುಖವನ್ನು ಹೇಗೆ ಪಡೆಯಬಹುದು ಎಂಬುದನ್ನು ವೇದ ವ್ಯಾಸರು ಗರುಡ ಪುರಾಣದಲ್ಲಿ ಈ ರೀತಿ ಸೂಚಿಸಿದ್ದಾರೆ.

**ಸ್ವಕರ್ಮ ಧರ್ಮಾರ್ಜಿತ ಜೀವಿತಾನಾಂ**
**ಶಾಸ್ತ್ರೇಷು ದಾರೇಷು ಸದಾ ರತಾನಾಂ।**
**ಜೀತೇಂದ್ರಿಯಾಣಾಮತಿಥಿಪ್ರಿಯಾಣಾ ನ್ರಹೇಪಿ**
**ಮೋಕ್ಷಃ ಪುರುಷೋತ್ತಮಾನಾಂ॥**

**ಗರುಡ ಪುರಾಣ**

ಯಾರು ತನಗೆ ವಿಧಿಸಿದ ಕರ್ಮವನ್ನು ಧರ್ಮದಿಂದ ಮಾಡಿ ಅದರಿಂದ ಗಳಿಸಿದ ಸಂಪತ್ತಿನಿಂದ ಜೀವನವನ್ನು ನಡೆಸುತ್ತಾನೋ, ಶಾಸ್ತ್ರಗಳಲ್ಲಿಯೂ ತನ್ನ ಪತ್ನಿಯಲ್ಲಿಯೂ ಮಾತ್ತವೇ ಆಸಕ್ತನಾಗಿರುತ್ತಾನೋ, ಇಂದ್ರಿಯ ನಿಗ್ರಹಿಯಾಗಿ ಅತಿಥಿಗಳನ್ನು ಪ್ರೀತಿಸುತ್ತಾನೋ, ಅಂತಹ ಉತ್ತಮ ಪುರುಷನು ಮನೆಯಲ್ಲಿಯೇ ನಿತ್ಯ ಸುಖವನ್ನು ಕಾಣುತ್ತಾನೆ.

ಯೋಗವು ಋಷಿಮುನಿ ಪ್ರಣೀತ ಮೋಕ್ಷಶಾಸ್ತ್ರವಾಗಿದ್ದು, ಇದರ ನಿರಂತರ ಅಭ್ಯಾಸದಿಂದ ವ್ಯಕ್ತಿ, ಕರ್ಮದಲ್ಲೂ ಕೌಶಲ್ಯ ವನ್ನೂ, ಮನೋನಿಯಂತ್ರಣವನ್ನೂ ಸಾಧಿಸಿ ಆ ಮೂಲಕ ಆರೋಗ್ಯ, ಪುರುಷಾರ್ಥಗಳನ್ನು ಸಂಪಾದಿಸಿ, ಉತ್ತಮ ಬದುಕನ್ನು ನಡೆಸಿ, ನಿತ್ಯ ಸುಖವನ್ನು ಹೊಂದಬಹುದು ●

- **ಹೇಗೆ ನಿನಗೆ ದುಃಖವು ಪ್ರಿಯವಲ್ಲವೋ, ಹಾಗೆಯೇ ಎಲ್ಲ ಜೀವಿಗಳಿಗೂ ದುಃಖವು ಪ್ರಿಯವಲ್ಲ. – ಹೀಗೆಂದು ತಿಳಿದು ಮತ್ತು ಎಚ್ಚರಿಕೆಯಿಂದ ಎಲ್ಲರನ್ನೂ ತನ್ನಂತೆ ನೋಡುತ್ತಾ, ಎಲ್ಲರ ಮೇಲೂ ದಯೆ ತೋರಿಸು. – ಭಗವಾನ್ ಮಹಾವೀರ**
- **ಹೊರಗಿನ ಯುದ್ಧಗಳಿಂದ ಏನು ಲಾಭ ? ನಿನ್ನೊಳಗೆ ನೀನು ಯುದ್ಧವನ್ನು ಮಾಡು. ತನ್ನನ್ನು ತಾನು ಗೆದ್ದರೆ ಮಾತ್ರ ನಿಜವಾದ ಸುಖ ಪ್ರಾಪ್ತವಾಗುತ್ತದೆ. – ಭಗವಾನ್ ಮಹಾವೀರ**

# ಜೀವಂತ ದಂತಕಥೆ – ಬಿ.ಕೆ.ಎಸ್. ಅಯ್ಯಂಗಾರ್

■ ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು
ಸರ್ಕಾರಿ ಪ.ಪೂ. ಕಾಲೇಜು, ಬೆಂಗಳೂರು

**'ಆನಂದದಿಂದ ಬದುಕು, ಘನತೆಯಿಂದ ಮೃತ್ಯುವನ್ನು ಸ್ವೀಕರಿಸು'**

ಇದು ಧೀರರೆನಿಸಿದವರ ಸಂದೇಶ. ಜೀವನ ಶ್ರದ್ಧೆ, ಜೀವನ ಪ್ರೀತಿ, ಜೀವನಕಲೆ ಎಂದರೆ ಇದುವೇ ತಾನೆ? ತೊಂಭತ್ತರ ತುಂಬು ವಯೋಮಾನದಲ್ಲಿ ಪ್ರತಿನಿತ್ಯ ಮೂರುಗಂಟೆಗಳು ಯೋಗಾಸನಗಳ ಅಭ್ಯಾಸ, ಒಂದು ಗಂಟೆ ಪ್ರಾಣಾಯಾಮ ಮಾಡುತ್ತಿದ್ದ ಯೋಗ ಗುರು ಬಿ.ಕೆ.ಎಸ್ ಅಯ್ಯಂಗಾರ್ ಬದುಕನ್ನು ನಡೆಸಿದ ರೀತಿ ಇದು.

**ಗೌರವಿಸು ಜೀವನವ ಗೌರವಿಸು ಚೇತನವ**
**ಆರದೋ ಜಗವೆಂದು ಭೇದವೆಣಿಸದಿರು, ಹೋರುವುದೆ**
**ಜೀವನ ಸಮೃದ್ಧಿಗೋಸುಗ ನಿನಗೆ**
**ದಾರಿ ಆತ್ಮೋನ್ನತಿ ಮಂಕುತಿಮ್ಮ**

ಕವಿ ಋಷಿ ಡಿ.ವಿ.ಜಿ ಯವರ ಕಗ್ಗದ ಸಂದೇಶವನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಭವ್ಯವ್ಯಕ್ತಿ ಬಿ.ಕೆ.ಎಸ್ ಅಯ್ಯಂಗಾರ್. ಪ್ರಪಂಚದಾದ್ಯಂತ ಯೋಗವೆಂಬುದನ್ನು ಒಂದು ವಿಶಿಷ್ಟರೂಪ ವ್ಯಾಖ್ಯೆಯೊಂದಿಗೆ ಪರಿಚಯಿಸಿದ ಗುರು. ಅವರು ಹೇಳುತ್ತಿದ್ದರು "ಯೋಗ ಒಂದು ಸಂಗೀತದಂತೆ, ಶರೀರದ ಲಯ, ಮನದ ಮಾಧುರ್ಯ ಮತ್ತು ಆತ್ಮದೊಂದಿಗೆ ಸಾಮರಸ್ಯ ಎಲ್ಲದರ ಫಲವೇ ಬದುಕಿನ ಸ್ವರಸಮ್ಮೇಳನದ ನಿರ್ಮಾಣ'.

ಜೀವಂತ ದಂತಕಥೆಯೆನಿಸಿದ ಬಿ.ಕೆ.ಎಸ್. 1930ರಲ್ಲಿ ಯೋಗವನ್ನು ಬೋಧಿಸಲು ತೊಡಗಿದಾಗ 'ಯೋಗ' ಕೇವಲ ಸಾಧುಸಂತರು ಮಾತ್ರ ಅಭ್ಯಾಸ ಮಾಡುವ ವಿದ್ಯೆಯೆಂಬ ಅಭಿಪ್ರಾಯವಿತ್ತು. ಆದರೆ ಪವಾಡದಂತೆ ಅತ್ಯಲ್ಪ ಅವಧಿಯಲ್ಲಿ ಅವರು ತಮ್ಮದೇ ಆವಿಷ್ಕಾರಗಳ ಮೂಲಕ ಹೊಸ ತಂತ್ರಗಳನ್ನು ಅಳವಡಿಸಿಕೊಂಡು ತಮ್ಮದೇ ವಿವರಣೆಯೊಂದಿಗೆ ಯೋಗದ ವ್ಯಾಖ್ಯೆಯನ್ನೇ ಬದಲಿಸಿಬಿಟ್ಟರು. ಅವರೊಬ್ಬ **ಪ್ರಾಮಾಣಿಕ, ಬದ್ಧತೆಯುಳ್ಳ ನಿರಂತರ ಅಭ್ಯಾಸದಲ್ಲಿ ತೊಡಗಿದ ಗುರುವಾಗಿದ್ದರು.** ಯಾವುದೇ ವಿದ್ಯಾರ್ಥಿ ತನ್ನ ಗುರಿ ಸಾಧಿಸಲು ಈ ಮೂರು ಅಂಶಗಳು ಅತ್ಯಗತ್ಯವೆಂಬುದನ್ನು ಸ್ವತಃ ಆಚರಣೆಯ ಮೂಲಕವೇ ಕಲಿಸುತ್ತಿದ್ದರು.

ಎಪ್ಪತ್ತೈದು ವರ್ಷಗಳ ನಿರಂತರ ಬೋಧನೆಯ ನಂತರವೂ ಅವರು ಹೇಳುತ್ತಿದ್ದ ಮಾತು "ನಾನಿನ್ನೂ ಕೆಲವು ಆಸನಗಳನ್ನು ಸಂಪೂರ್ಣವಾಗಿ ಕರಗತ ಮಾಡಿಕೊಂಡಿಲ್ಲ. ನಾನಿನ್ನೂ ಕಲಿಯುತ್ತಿದ್ದೇನೆ' ಇದಕ್ಕಿಂತ ಉತ್ತಮವಾದ ಪ್ರೇರಣೆ ಬೇಕಿಲ್ಲ.

'ಯೋಗ ಅವರ ಸರ್ವಸ್ವವಾಗಿತ್ತು. ಅವರದೇ ಮಾತುಗಳಲ್ಲಿ ಹೇಳುವುದಾದರೆ 'ಯೋಗ ನನ್ನನ್ನು ಬದುಕಿಸಿತು, ನಾನದನ್ನು ನನ್ನ ಆರೋಗ್ಯಕ್ಕೋಸ್ಕರ ಕಲಿತೆ, ನಂತರ ಅದನ್ನೇ ನನ್ನ ಜೀವನದ ಧ್ಯೇಯವನ್ನಾಗಿಸಿಕೊಂಡೆ'. ಬಾಲ್ಯದಲ್ಲಿ ಇನ್‌ಫ್ಲುಯೆಂಜ, ಮಲೇರಿಯಾ, ಟೈಫಾಯಿಡ್, ಟ್ಯೂಬರ್ ಕಿಲೋಸಿಸ್ ನಂತಹ ಹಲವು ರೋಗಗಳಿಂದ ಪೀಡಿತವಾಗುವುದರೊಂದಿಗೆ, ಬಡತನದ ಕಾರಣದಿಂದ ಅಪೌಷ್ಟಿಕತೆಯೂ ಸೇರಿ ಕೃಶ ಶರೀರಿಯಾಗಿದ್ದ ಬಿ.ಕೆ.ಎಸ್. 'ಯೋಗ' ದ ಮೂಲಕ ಆರೋಗ್ಯಪೂರ್ಣ ಜೀವನ ನಡೆಸಿದ್ದಲ್ಲದೆ ತೊಂಭತ್ತೈದು ವರ್ಷಗಳ ತುಂಬು ಬಾಳನ್ನು ಅನುಭವಿಸಲು ಸಾಧ್ಯವಾಗಿತ್ತು.

'ಯೋಗ'ದ ಅದ್ಭುತ ಶಕ್ತಿಯನ್ನು ದೇಶ, ವಿದೇಶಗಳಲ್ಲಿ ಪರಿಚಯಿಸುತ್ತ ಸಾವಿರಾರು ಮಂದಿ ಅದರ ಪ್ರಯೋಜನವನ್ನು ಹೊಂದಲು ಕಾರಣರಾದ ಬಿ.ಕೆ.ಎಸ್. ಯೋಗದ ಫಲಾನುಭವಿಗಳಲ್ಲಿ 'ಸೆಲೆಬ್ರಿಟಿ'ಗಳ ಸಂಖ್ಯೆಯೂ ಕಡಿಮೆಯಿಲ್ಲ. ಇದಕ್ಕೆ ವಿದೇಶಗಳೂ ಹೊರತಾಗಿಲ್ಲ. ಪ್ರಸಿದ್ಧ ವಯೊಲಿನ್‌ವಾದಕ ಯಹೂದಿ ಮೆನುಹಿನ್, ಬೆಲ್ಜಿಯಂ ಮಹಾರಾಣಿ, ಇಂಡೋನೇಷಿಯಾದ ಉಪಾಧ್ಯಕ್ಷ, ಆರನೇ ಪೋಪ್ ಪಾಲ್ ಮತ್ತು ಸಚಿನ್ ತೆಂಡುಲ್ಕರ್ ಹೀಗೆ ಹಲವು ಅಭಿಮಾನಿಗಳು ಆ ಸಾಲಿನಲ್ಲಿದ್ದಾರೆ. ಪ್ರತಿಯೊಬ್ಬರ ಅನುಭವವೂ ರೋಮಾಂಚಕ, ಕುತೂಹಲಕಾರಿ.

1952ರಲ್ಲಿ ವಯೊಲಿನ್ ಮಾಂತ್ರಿಕ ಯಹೂದಿ ಮೆನುಹಿನ್‌ರೊಡನೆ ಆದ ಪ್ರಥಮ ಭೇಟಿ ಇಂತಹುದೇ. 34 ವಯಸ್ಸಿನ ಸುಪ್ರಸಿದ್ಧ ವಯೋಲಿನ್ ವಾದಕ 36ವಯಸ್ಸಿನ ಸುವಿಖ್ಯಾತ ಯೋಗ ಪರಿಣಿತ ಬಿ ಕೆ ಎಸ್ ಪರಸ್ಪರರಲ್ಲಿ ಬೆಳೆದ ಸ್ನೇಹ ಸುದೀರ್ಘ ಅವಧಿಯ ಕಾಲ ಗಾಢವಾಗಿತ್ತು. ಅದು ಐವತ್ತು ವರ್ಷಗಳ ಗೆಳೆತನವಾಗಿತ್ತು. 1952ರಲ್ಲಿ ಭಾರತಕ್ಕೆ ಪಂ. ನೆಹರು ಅವರ ಅತಿಥಿಯಾಗಿ ಬಂದಿದ್ದ ಯಹೂದಿ ಮೆನುಹಿನ್‌ಗೆ ನೆಹರು ಬಿಕೆಎಸ್‌ರನ್ನು ಪರಿಚಯಿಸಿದ್ದರು. ಯೋಗ ಗುರುಗಳೊಂದಿಗೆ ಸಣ್ಣದೊಂದು ಭೇಟಿಗೆ ಮಾತ್ರ ಅವಕಾಶವೆಂದು ಹೇಳಿದ್ದ ಮೆನುಹಿನ್ ಮೂರುವರೆ ಗಂಟೆಗಳ ಕಾಲ ಸಂಭಾಷಿಸಿದ್ದರು. ತನ್ನ ದೈಹಿಕ ತೊಂದರೆಗೆ ಪರಿಹಾರವೇನೆಂದು ಕೇಳಿದ ಮೆನುಹಿನ್‌ಗೆ ಬಿ ಕೆ ಎಸ್ ಶವಾಸನವನ್ನು ಕಲಿಸಿದ್ದರು. ಕೆಲವೇ ನಿಮಿಷಗಳಲ್ಲಿ ಮೆನುಹಿನ್‌ರ ಸಮಸ್ಯೆ ಮಾಯವಾಗಿತ್ತು. ಯೋಗಾಭ್ಯಾಸದ ಪ್ರಯೋಜನವನ್ನು ಅರಿತು ಮುಂದುವರಿಸಿದ್ದಲ್ಲದೆ ಪರಸ್ಪರರ ಸ್ನೇಹಸಂಬಂಧ ಮೆನುಹಿನ್‌ರ ಕೊನೆಗಳಿಗೆಯವರೆಗೂ ಬೆಸೆದುಕೊಂಡಿತ್ತು. ಯೋಗ ವಿದ್ಯಾರ್ಥಿಯಾಗಿ ಮೆನುಹಿನ್ ಪಡೆದುಕೊಂಡ ಪ್ರಾವೀಣ್ಯಕ್ಕೆ ನಿದರ್ಶನವೆಂದರೆ 1982ರಲ್ಲಿ ಬೆಥೋವನ್‌ನ ಐದನೇ ಸಂಗೀತ ಮೇಳದಲ್ಲಿ ಅವರು ಶೀರ್ಷಾಸನದಲ್ಲಿದ್ದು ತಮ್ಮ ಸಹಾಯಕರಿಗೆ ನಿರ್ದೇಶನ ನೀಡುತ್ತ ಪ್ರಾರಂಭೋತ್ಸವವನ್ನು ಮಾಡಿದ್ದರು. ತಮ್ಮ ಕಾಲುಗಳ ಚಲನೆಯಿಂದ ಸೂಚನೆ ನೀಡುತ್ತಿದ್ದರು. ಬಿ ಕೆ ಎಸ್ ಸೂಚಿಸಿದ ಭಂಗಿಗಳು ಅವರ ಸ್ನಾಯುಸಂಬಂಧೀ ನೋವನ್ನೆಲ್ಲ ಸಂಪೂರ್ಣವಾಗಿ ಹೋಗಲಾಡಿಸಿದ್ದುವು. ತಮ್ಮ ಶಿಷ್ಯರಿಗೆ ಸಹ ಯೋಗಾಭ್ಯಾಸ ಮಾಡಲು ಸೂಚಿಸುತ್ತಿದ್ದರು. ತಮಗೆ ಯೋಗ ಕಲಿಸಿದ ಬಿ ಕೆ ಎಸ್ ತಮ್ಮ ಅತ್ಯುತ್ತಮ ವಯೊಲಿನ ಗುರುವೆಂದೇ ಮೆನುಹಿನ್ ಹೇಳುತ್ತಿದ್ದರು.

ತೊಂಭತ್ತೈದರ ವಯಸ್ಸಿನಲ್ಲಿಯೂ ಅವರು ಯೋಗಾಸನಗಳನ್ನು ಪ್ರದರ್ಶಿಸುತ್ತಿದ್ದಾಗ ನೋಡುತ್ತಿದ್ದವರಿಗೆ ಅವರೊಬ್ಬ ಕಲಾವಿದನಂತೆ ಭಾಸವಾಗುತ್ತಿತ್ತಂತೆ. ಹಾಗಿರುತ್ತಿತ್ತು ಅವರ ಪ್ರದರ್ಶನ.

ಯೋಗಗುರು ಶಿಷ್ಯರಾದವರಿಗೆ ಐದು ಅಂಶಗಳನ್ನು ಬೋಧಿಸುತ್ತಾರೆ.

1. ನೀನು ಅತ್ಯುತ್ತಮ ವಿದ್ಯಾರ್ಥಿಯಾಗದಿದ್ದರೂ ನಿನ್ನ ಗುರುವಿಗೆ ವಿಧೇಯನಾಗು.
2. ನಿನ್ನ ಜ್ಞಾನವನ್ನು ಇತರರೊಂದಿಗೆ ಹಂಚಿಕೊಳ್ಳುವುದರ ಮೂಲಕ ವಿಸ್ತರಿಸು.

ಪುಟ 14 ಕ್ಕೆ ➤

# ಸುಶಿಕ್ಷಿತ ಸುಸಂಸ್ಕೃತ ಮಕ್ಕಳೇ ನಾಳಿನ ಆಸ್ತಿ

**ಮಹಾಪುರುಷರ ಕತೆ ಕೇಳಬೇಕು. ಅವರು ಅನುಭವಿಸಿದ ಕಷ್ಟಗಳನ್ನು ಸ್ಮರಿಸಬೇಕು. ಅವರಂತೆಯೇ ದೊಡ್ಡ ಸ್ತರಕ್ಕೆ ಏರಬೇಕು. ಆದರೆ ನಮ್ಮ ಮನೆಯಿಂದ ಮಹತ್ಕಾರ್ಯ ಮಾಡಲು ಯಾರಾದರೂ ಮುಂದಾಗುತ್ತಾರೆಂದರೆ ಅದಕ್ಕೆ ನಮ್ಮಿಂದಲೇ ಪ್ರತಿರೋಧ ಬರುತ್ತದೆ. 'ದೇಶಕ್ಕೆ ಮತ್ತೊಬ್ಬ ಸುಭಾಷ್ಚಂದ್ರ ಬೋಸ್, ಸ್ವಾಮಿ ವಿವೇಕಾನಂದರು ಹುಟ್ಟಿಬರುವುದಾದರೆ ಅದು ನಮ್ಮ ಮನೆಯಲ್ಲಿ ಬೇಡ ಪಕ್ಕದಮನೆಯಿಂದಲೇ ಆಗಲಿ.' ಇದೊಂದು ಸಾಮಾನ್ಯವಾಗಿ ಕಾಣಕೇಳಸಿಗುವ ಸಂಗತಿ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಮಹಾಪುರುಷನಾಗುವವನ ಹಾದಿಯಲ್ಲಿ ಕಲ್ಲು–ಮುಳ್ಳುಗಳಿಂದ ತೊಂದರೆಗಳು ಬಂದರೆ, ಅಪಜಯವಾದರೆ, ಸಮಾಜ ನೋಡುವ ತರಹವೇ ಬೇರೆ ಎಂಬ ಅಂಜಿಕೆಯನ್ನಿಟ್ಟುಕೊಂಡು ಮಗುವಿನ ಕನಸನ್ನೂ, ದೇಶದ ಅವಶ್ಯಕತೆಯನ್ನೂ ಕಡೆಗಾಣಿಸಿಬಿಡುತ್ತೇವೆ.**

ಇತ್ತೀಚೆಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳಲ್ಲಿ ಫಲಿತಾಂಶ ಬಂದಾಗಿನಿಂದ ಒಂದು ವಾಟ್ಸಾಪ್ ಸಂದೇಶ ಹರಿದಾಡ ಲಾರಂಭಿಸಿದೆ: "ಶೇಕಡ 90 ಹಾಗೂ ಮೇಲ್ಪಟ್ಟು ಅಂಕಗಳನ್ನು ಪಡೆದ ಮಕ್ಕಳೇ, ನಿಮ್ಮ ಸುತ್ತಲಿನ ಪರಿಸರದಲ್ಲಿ ಕನಿಷ್ಠ ಇಪ್ಪತ್ತು ಹಕ್ಕಿ, ಸಸ್ಯ ಪ್ರಬೇಧಗಳನ್ನು ಗುರುತಿಸಬಲ್ಲಿರಾ? ನೀವು ಎಂದಾದರೂ ನಿಮ್ಮ ತಂದೆತಾಯಿಯರ ಕೆಲಸದಲ್ಲಿ ಭಾಗಿಯಾಗಿದ್ದೀರಾ? ಪ್ರತಿ ವರ್ಷ ಎಷ್ಟು ಪಠ್ಯೇತರ ಪುಸ್ತಕಗಳನ್ನು ಓದುತ್ತೀರಿ? ನೀವೆಂದಾದರೂ ಕತ್ತಿ ಹಿಡಿದು ತೆಂಗಿನ ಸಿಪ್ಪೆ ಬಿಡಿಸಿದ್ದೀರಾ? ಗುದ್ದಲಿ ಹಿಡಿದು ಗಿಡ ನೆಟ್ಟಿದ್ದೀರಾ? ಬ್ಯಾಂಕ್, ಅಂಚೆ ಇಲಾಖೆ, ಕೃಷಿ ಭೂಮಿ, ಸಣ್ಣ ಕೈಗಾರಿಕಾ ಕಾರ್ಖಾನೆಗಳು ಹೇಗೆ ಕೆಲಸ ಮಾಡುತ್ತವೆ ಎಂದು ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ?" ಹೀಗೆ ಹಲವು ಪ್ರಶ್ನೆಗಳ ಪಟ್ಟಿ ಈ ಸಂದೇಶದಲ್ಲಿತ್ತು. ವಾಟ್ಸಾಪ್‌ನಲ್ಲಿಯೂ ಚರ್ಚೆ ಬಿರುಸಾಗಿ ನಡೆದಿತ್ತು. ಇದಕ್ಕೆ ಪ್ರತಿಯಾಗಿ ಯಾರೋ ಹೆಚ್ಚು ಅಂಕ ಪಡೆಯಲಾಗದವರೇ ಬರೆದಿರುವ ಸಾಲುಗಳಿವು ಎಂಬ ಮಾತುಗಳೂ ಕೇಳಿಬಂದವು. ಉತ್ತಮ ಅಂಕ ಪಡೆದು ಉತ್ತೀರ್ಣ ರಾಗುವುದು ಒಂದು ಸಾಧನೆ ಹೌದಾದರೂ, ದಿನನಿತ್ಯದ ಬದುಕಿನಲ್ಲಿ ಎದುರಾಗುವ ಕೆಲಸಗಳನ್ನೂ ನಮ್ಮ ಮಕ್ಕಳು ಅಷ್ಟೇ ಉತ್ತಮವಾಗಿ ನಿರ್ವಹಿಸಬಲ್ಲರೇ ಎನ್ನುವುದು ಆ ಸಂದೇಶ ಎತ್ತಿದ ಒಂದು ಪ್ರಶ್ನೆ. ಆ ನಿಟ್ಟಿನಲ್ಲಿ ಮೇಲಿನ ಪ್ರಶ್ನೆಗಳು ಸಮಂಜಸವಾಗಿವೆ ಎಂದೆನಿಸುತ್ತದೆ.

ನಾವಿಂದು ನಮ್ಮ ಮಕ್ಕಳ ಶಿಕ್ಷಣಕ್ಕಾಗಿ ಉತ್ತಮೋತ್ತಮ ಶಾಲೆಗಳನ್ನೇ ಹುಡುಕಿಕೊಂಡು ಹೋಗುತ್ತಿದ್ದೇವೆ. ಹೆಸರಿರುವ ಶಿಕ್ಷಣ ಸಂಸ್ಥೆಯಲ್ಲಿ ಸೀಟು ಪಡೆದರೆ ಉತ್ತಮ ಶಿಕ್ಷಣ ಸಿಗುತ್ತದೆ, ಅದರಿಂದ ಅವರಿಗೆ ಸಾಕಷ್ಟು ಸಂಬಳತರುವ ನೌಕರಿ ಸಿಗುತ್ತದೆ, ಹಣದಿಂದ ಬೇಕಾದುದನ್ನು ಖರೀದಿಸಬಹುದು ಹೀಗೆ ಸಾಮಾನ್ಯವಾಗಿ ಹೆಚ್ಚಿನ ಪಾಲಕರು ಯೋಚಿಸುತ್ತಾರೆ. ಕೆಲವು ಪಾಲಕರಿಗೆ ಈ ವಾದ ಒಪ್ಪಿಗೆಯಿಲ್ಲದಿದ್ದರೂ, ಸುಮ್ಮನೆ ನಮ್ಮ ಮಕ್ಕಳೇಕೆ ಉಳಿದವರಿಗಿಂತ ಹಿಂದೆ ಬೀಳಬೇಕು ಎನ್ನುವ ಒತ್ತಡವು ಕೆಲವೊಮ್ಮೆ ಪ್ರಭಾವ ಬೀರುತ್ತದೆ. ಈ ಧಾವಂತದಿಂದಾಗಿ ಮುಂಚೆಲ್ಲಾ ಐದು ವರ್ಷ ತುಂಬಿದ ಬಳಿಕ ಶಾಲೆಗೆ ಹೋಗುತ್ತಿದ್ದ ದಿನಗಳು ಇಂದು ಎರಡುವರೆ ವರ್ಷಗಳ ಮಕ್ಕಳನ್ನೂ ಶಾಲೆಗೆ ಅಟ್ಟುವ ಸಂದರ್ಭಗಳು ಪೋಷಕರಿಗೆ ಬಂದೊದಗಿದೆ. ಒಂದು ಕಾಲದಲ್ಲಿದ್ದ 'ಮನೆಯೇ ಮೊದಲ ಪಾಠಶಾಲೆ' ಎಂಬ ಉಕ್ತಿಯು ಗಾದೆಗಷ್ಟೇ ಸೀಮಿತವಾಗುತ್ತಲಿದೆ. ಮಕ್ಕಳು ಶಾಲೆಯ ಹೊರಗಡೆಯೂ ಕಲಿಯುವ ಸಮಯ ದೂರವಾಗುತ್ತಾ ಶಾಲೆಯೇ ಸರ್ವಸ್ವ ಎಂಬ ಮಾತುಗಳು ಪೋಷಕರಿರಲಿ, ಮಕ್ಕಳೂ ಆಡುತ್ತಿದ್ದಾರೆ. ಆದ್ದರಿಂದ ಶಾಲೆಗಳು ಕಲಿಕೆಗೆ ಹೊರಗುತ್ತಿಗೆ ಎಂಬಂತೆ ಭಾಸವಾಗುತ್ತಿದೆ.

ಕಾಲ ಬದಲಾದಂತೆ ಶಾಲೆಯ ಪಠ್ಯಗಳೂ ಬದಲಾಗುತ್ತವೆ ಎಂಬುದು ಹೊಸತೇನಲ್ಲ. ನಮ್ಮ ಹಿರಿಯರ ಕಾಲದ ಓದಿಗೂ ಇಂದಿಗೂ ಅಜಗಜಾಂತರ. ಇಂದಿನ ದಿನಗಳಲ್ಲಿ ವಿಜ್ಞಾನ, ಸಮಾಜ, ಗಣಿತ ಅವಶ್ಯಕತೆಗೆ ಬೇಕಾದಂತೆ ಹೆಚ್ಚು ಕ್ಲಿಷ್ಟಗೊಳ್ಳುತ್ತಲೇ ಹೋಗುತ್ತದೆ. ಇಂದು ವಿದ್ಯಾರ್ಥಿಗಳು ತಮ್ಮ ಜೀವನದ ಗುರಿಯಾಗಿ ಹೆಚ್ಚು ಆದಾಯ ನೀಡುವ ವೃತ್ತಿಯನ್ನು ಆಯ್ಕೆಮಾಡುತ್ತಿದ್ದಾರೆ. ಆ ವೃತ್ತಿಗೆ ಬೇಕಿರುವಷ್ಟೇ ಓದುವ ಅಭ್ಯಾಸವೂ ಸಾಮಾನ್ಯವಾಗಿಬಿಟ್ಟಿದೆ. ಹಾಗೆಯೇ ಭಾಷೆ, ಸಾಹಿತ್ಯ ಕಲೆಗಳನ್ನು ಕಲಿಯುವುದು ಪ್ರಯೋಜನಕ್ಕೆ ಬಾರದೇ ಇರುವುದು ಎನ್ನುವ ಭಾವನೆಯೂ ಬೆಳೆಯುತ್ತಿದೆ. ಭಾಷೆ, ಸಾಹಿತ್ಯವನ್ನು ಓದುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ಅಷ್ಟೇ ಅಲ್ಲದೇ ಮೂಲಭೂತ ವಿಜ್ಞಾನಗಳು, ಕೃಷಿ ವಿಜ್ಞಾನಗಳನ್ನು ಓದುವವರೂ ಕಡಿಮೆಯಾಗುತ್ತಲಿದ್ದಾರೆ. ಇತ್ತೀಚೆಗೆ ಸಂಗೀತ ನೃತ್ಯಗಳನ್ನು ಕಲಿಯುವುದು ಕಂಡುಬಂದರು ರಿಯಾಲಿಟಿ ಶೋ ಸಲುವಾಗಿಯೋ ಅಥವಾ ಶಾಲೆಯ ವಾರ್ಷಿಕೋತ್ಸವಗಳ ಪ್ರದರ್ಶನಗಳಿಗೆ ಮಾತ್ರ ಸೀಮಿತವಾಗುವುದೂ ಕಾಣುತ್ತದೆ. ಉದ್ಯೋಗ, ಹಣಗಳಿಸುವ ಸಲುವಾಗಿ ಓದು ಎಂಬುದು ನಮ್ಮಲ್ಲಿ, ನಮ್ಮ ಮಕ್ಕಳಲ್ಲಿ ಬೇರೂರಿರುವುದು ಒಳ್ಳೆಯ ಬೆಳವಣಿಗೆಯಲ್ಲ.

ಇನ್ನೊಂದೆಡೆ ನಮ್ಮ ಶಿಕ್ಷಣ ಪದ್ಧತಿ ಸರಿ ಇಲ್ಲ ಎಂದು ದೂರುವ ಒಂದು ವರ್ಗವನ್ನೂ ನಾವು ಕಾಣುತ್ತೇವೆ. ಹಾಗಾದರೆ ಇಂದಿನ ಶಿಕ್ಷಣ ವ್ಯವಸ್ಥೆಯ ಚೌಕಟ್ಟಿನ ಪರಿಮಿತಿಯಲ್ಲಿ ನಮ್ಮ ಮಕ್ಕಳು ಸುಸಂಸ್ಕೃತ ನಾಗರಿಕರಾಗಿ ತಯಾರಾಗಿ ಅರ್ಥಪೂರ್ಣ ಜೀವನ ನಡೆಸಲು ಸಾಧ್ಯವಾಗುವಂತೆ ತಯಾರುಮಾಡಲು ಸಾಧ್ಯವೇ? ಈ ಹಿನ್ನೆಲೆಯನ್ನು ಮನದಲ್ಲಿಟ್ಟುಕೊಂಡು ಒಂದಿಷ್ಟು ಚಟುವಟಿಕೆಗಳನ್ನು ನಮ್ಮ ಮಕ್ಕಳ ಶಾಲಾಶಿಕ್ಷಣದ ಜೊತೆಗೆ ಜೋಡಿಸಿಕೊಳ್ಳಬಹುದು.

• **ಪ್ರತಿ ತಿಂಗಳು ಒಂದೆರಡು ಒಳ್ಳೆಯ ಪುಸ್ತಕ ಓದುವುದು.** ಕೊಂಡು ಓದುವುದು ಎಲ್ಲರಿಗೂ ಸಾಧ್ಯವಾಗದಿರಬಹುದು. ನಮ್ಮ ಊರುಗಳಲ್ಲಿನ ಗ್ರಂಥಾಲಯಗಳನ್ನು ಗುರುತಿಸಿಕೊಂಡು ಅಲ್ಲೊಂದು ಸದಸ್ಯತ್ವ ಪಡೆದು ಜೀವನಚರಿತ್ರೆ, ವಿಜ್ಞಾನ ಸಂಶೋಧನೆ, ಪುರಾಣ ಕಥೆ, ಪ್ರವಾಸ ಕಥನ ಮೊದಲಾದ ವಿಷಯಗಳ ಪುಸ್ತಕಗಳನ್ನು ನಾವೂ ಓದಿ ಮಕ್ಕಳೂ ಓದಲು ಪ್ರೇರೇಪಿಸಿ ಮನೆಯಲ್ಲಿ ವಿಷಯದ ಚರ್ಚೆ ಮಾಡಬಹುದು. ನಾವು ತಿಳಿದುಕೊಂಡ ಹೊಸ ವಿಷಯವನ್ನು ಒಂದು ಪುಸ್ತಕದಲ್ಲಿ ಟಿಪ್ಪಣಿಯಾಗಿ ಬರೆದಿಟ್ಟರೆ, ಮುಂದೊಂದು ದಿನ ಅದೇ ವಿಷಯ ಪ್ರಯೋಜನಕ್ಕೆ ಬರಬಹುದು. ಹಾಗೂ ಹೆಚ್ಚು ಓದುವುದರಿಂದ ಭಾಷಾಶುದ್ಧಿಯು ದೊರಕುವುದು, ಶಬ್ದ ಸಂಗ್ರಹ ಬೆಳೆಯುವುದು.

• **ಬಾಯಿಪಾಠ ಅಭ್ಯಾಸ:** ಮಕ್ಕಳಿಗೆ ಅಜ್ಜ ಅಜ್ಜಿಯರು ಹಿಂದೆಲ್ಲ ಬಾಯಿಪಾಠ, ಮಗ್ಗಿ ಹೇಳಿಕೊಡುತ್ತಿದ್ದುದು ವಾಡಿಕೆ. ಸಂಜೆ ಆಡಿ ಬಂದಮೇಲೆ ಮನೆಪಾಠ, ಬಾಯಿಪಾಠ ಕಲಿಕೆಯ ಒಂದು ಭಾಗವಾಗಿತ್ತು. ಸಂವತ್ಸರಗಳು, ನಕ್ಷತ್ರಗಳು, ರಾಶಿ, ತಿಥಿಗೆ ಸಂಬಂಧಿತ ಹಬ್ಬಗಳು,

ಪುಟ 14 ಕ್ಕೆ ➤

➢ ಪುಟ 12 ರಿಂದ..... ಜೀವಂತ ದಂತಕಥೆ...

3. ಹೊಸ ಹೊಸ ಅವಕಾಶಗಳಿಗೆ ನಿನ್ನನ್ನು ತೆರೆದುಕೋ ಮತ್ತು ಗೆಳೆಯರನ್ನು ಸಂಪಾದಿಸು.
4. ಪರಿಶ್ರಮವು ಉತ್ತಮ ಫಲಿತಾಂಶವನ್ನೇ ನೀಡುತ್ತದೆ.
5. ಕಲಿಯುವುದನ್ನು ಎಂದಿಗೂ ನಿಲ್ಲಿಸದಿರು

ಇದೆಲ್ಲ ಬಿ ಕೆ. ಎಸ್ ಸ್ವತಃ ಬದುಕಿನಲ್ಲಿ ಅಳವಡಿಸಿಕೊಂಡಿದ್ದ ಗುಣಗಳು. 75 ವರ್ಷಗಳ ನಿರಂತರ ಬೋಧನೆಯ ನಂತರವೂ ಅವರು ಹೇಳುತ್ತಿದ್ದ ಮಾತು "ನಾನಿನ್ನೂ ಕೆಲವು ಆಸನಗಳನ್ನು ಸಂಪೂರ್ಣ ಕರಗತ ಮಾಡಿಲ್ಲ, ನಾನಿನ್ನೂ ಕಲಿಯುತ್ತಿದ್ದೇನೆ" ಯೋಗಾಸನಗಳನ್ನು ಮಾಡಲು ಅವರು ಬಳಸಿಕೊಳ್ಳುತ್ತಿದ್ದ ಸಾಮಾನ್ಯ ಸಾಮಗ್ರಿಗಳು ಎಂತಹವರೂ ಯೋಗವನ್ನು ಅಭ್ಯಸಿಸಲು ಸಾಧ್ಯ ಮಾಡುತ್ತಿದ್ದವು. ಅದೇ ಅವರ ವೈಶಿಷ್ಟ್ಯವಾಗಿತ್ತು. ಆದ್ದರಿಂದಲೇ ಅವರೊಬ್ಬ ಅತ್ಯುತ್ತಮ, ಜನಪ್ರಿಯ ಯೋಗ ಗುರುವಾಗಲು ಸಾಧ್ಯವಾಗಿತ್ತು. ●

➢ ಪುಟ 13 ರಿಂದ..... ಮಕ್ಕಳೇ ನಾಳಿನ ಆಸ್ತಿ...

ಒಂದಷ್ಟು ಶ್ಲೋಕಗಳು ಈ ಬಾಯಿಪಾಠದ ಹೂರಣ. ಇಂದಿನ ದಿನಗಳಲ್ಲಿ ಹೆಸರಾಂತ ಶಾಲೆಗೆ ಮಕ್ಕಳನ್ನು ಕಳಿಸುವುದರಿಂದ ಇದರ ಅಗತ್ಯವಿಲ್ಲವೆಂದು ಭಾವಿಸುತ್ತೇವೆ. ಆದರೆ ಈ ಪಾಠಗಳು ಶಾಲೆಯಲ್ಲೂ, ಮನೆಯಲ್ಲೂ ದೊರಕದೆ ಮಕ್ಕಳು ಸಾಂಸ್ಕೃತಿಕ, ರಾಷ್ಟ್ರೀಯ ಭಾಗಲಬ್ಧ (quotient) ದಿಂದ ದೂರವಾಗುತ್ತಿದ್ದಾರೆ. ಹಾಗೆಯೇ ಸ್ಮರಣಶಕ್ತಿ ಸದೃಢವಾಗಲು ಬಾಯಿಪಾಠ ಒಂದು ಉತ್ತಮ ಸಾಧನ.

● **ನೈತಿಕ ಮೌಲ್ಯಗಳು:** ಶಾಲೆಗಳಿಂದ ಕಲಿಯುವ ಪಾಠದ ಜೊತೆ ಮನುಷ್ಯ ದಿನನಿತ್ಯದಲ್ಲಿ ಹಲವಾರು ನೈತಿಕ ಸವಾಲುಗಳನ್ನು ಎದುರಿಸುತ್ತಿರುತ್ತಾನೆ. ತನ್ನ ಸುತ್ತಲಿನ ಜನರು, ಪ್ರಾಣಿ ಪಕ್ಷಿ ಜೀವಸಂಕುಲ, ಗಿಡಮರಗಳು ಪರಿಸರ ಇವುಗಳೊಂದಿಗಿನ ವ್ಯವಹಾರವನ್ನು ನಿರ್ಧರಿಸುವುದು ಇವೇ ಮೈಗೂಡಿಸಿಕೊಂಡ ನೈತಿಕ ಮೌಲ್ಯಗಳು. ಹಿಂದಿನ ದಿನಗಳಲ್ಲಿ ಅಮ್ಮ ಅಜ್ಜಿ ಶಾಲೆಯ ಮಾಸ್ತರರು ಹೇಳುವ ಕಥೆಗಳು, ಹಿತವಚನಗಳು ಮಕ್ಕಳಲ್ಲಿ ಈ ಮೌಲ್ಯಗಳನ್ನು ಕಲಿಸುತ್ತಿದ್ದವು. ಇಂದು ಕೆಲವು ಶಾಲೆಗಳಲ್ಲಿ ಕೊಂಚ ಮಟ್ಟಿಗಾದರೂ ಇದೆಯಾದರೂ ಮಕ್ಕಳು ಅವನ್ನು ಹೇಗೆ ಗ್ರಹಿಸುತ್ತಾರೆ ಎಂದು ಯಾರೂ ಅಳೆಯುವುದಿಲ್ಲ. ಆದ್ದರಿಂದ ನಮ್ಮ ಮಕ್ಕಳ ದಿನನಿತ್ಯದ ವ್ಯವಹಾರಗಳನ್ನು ಚಿಕ್ಕಚಿಕ್ಕ ಕಾರ್ಯಗಳನ್ನು ಗಮನಿಸಿ ಸುಸಂಸ್ಕೃತ ಆಚರಣೆಯನ್ನು ತಿದ್ದಿ ರೂಢಿಸುವುದು ಮನೆಯಲ್ಲಿ ಮಾತ್ರ ಸಾಧ್ಯ.

● **ಪ್ರಯೋಗ ಶಾಲೆಗಳು, ಪ್ರವಾಸ:** ಶಾಲೆಗಳು ಶೈಕ್ಷಣಿಕ ವರ್ಷದಲ್ಲಿ ಒಂದಷ್ಟು ಪ್ರವಾಸಗಳನ್ನು ಹಮ್ಮಿಕೊಂಡಿರುತ್ತವೆ. ಶೈಕ್ಷಣಿಕ ಪ್ರವಾಸದ ಜೊತೆಗೆ ವಾರಾಂತ್ಯ, ಶಾಲಾ ರಜದಿನಗಳಂದು ವಿದ್ಯಾರ್ಥಿಗಳಿಗೆ ಸಾಮಾಜಿಕ ಸೇವಾ ಸಂಸ್ಥೆಗಳು, ಸರಕಾರಿ ಕಛೇರಿಗಳು ಕಾರ್ಯ ನಿರ್ವಹಿಸುವುದು ಹೇಗೆ ಎಂಬ ಬಗ್ಗೆ ಅರಿವು ಮೂಡಿಸುವ ಕೆಲಸ ವಾಗಬೇಕು. ಉದಾಹರಣೆಗೆ ಬ್ಯಾಂಕ್ ವ್ಯವಹಾರ, ಅಂಚೆ ಕಛೇರಿಗಳು ಕಾರ್ಯನಿರ್ವಹಿಸುವ ಬಗೆಯನ್ನು ತೋರಿಸಿಕೊಟ್ಟರೆ ವ್ಯವಹಾರ ಜ್ಞಾನವನ್ನು ಸುಲಭವಾಗಿ ಮಕ್ಕಳು ಕಲಿತುಕೊಳ್ಳಬಹುದು.

● **ಪ್ರಚಲಿತ ವಿದ್ಯಮಾನಗಳ ಕುರಿತ ತಿಳುವಳಿಕೆ.** ಹಿರಿಯರಾಗಿ ನಾವು ಒಂದು ವಾರ್ತಾಪತ್ರಿಕೆಯನ್ನು, ಸುದ್ದಿವಾಹಿನಿಯನ್ನು ಮಡಿವಂತಿಕೆ ಯಿಂದ ನೋಡುತ್ತೇವೆ. ಅದೇ ಅಭ್ಯಾಸ ವಿದ್ಯಾರ್ಥಿಗಳಿಗೆ ಬೇಡ. ಸಿಕ್ಕಿದ್ದೆಲ್ಲವನ್ನೂ ಓದುತ್ತಾ, ಪ್ರಚಲಿತ ವಿದ್ಯಮಾನಗಳು, ನಮ್ಮ ಸುತ್ತಲಿನ ಸಮಾಜದಲ್ಲಿನ ಒಳಿತು–ಕೆಡುಕುಗಳನ್ನು ಓದಿ ತಾವು ತಿಳುವಳಿಕೆಯ ಹಾದಿ ಹಿಡಿಯುತ್ತಿದ್ದಾರಾ ಎಂದು ಕೇಳಿಕೊಳ್ಳುವುದು ಪ್ರಶಂಸನೀಯ. ಅಲ್ಲದೇ ರಾಜ್ಯ, ದೇಶ, ವಿದೇಶದ ಮಾಹಿತಿಗಳನ್ನು ಕಲೆಹಾಕಿ ತಮ್ಮ ಮಿತ್ರರೊಂದಿಗೆ ಆ ವಿಷಯಗಳ ಚರ್ಚೆ ನಡೆಸುತ್ತಾ ಹೊಸ ವಿಷಯಗಳ ಬಗ್ಗೆ ತಿಳುವಳಿಕೆ ಬೆಳೆಸಿಕೊಳ್ಳುವುದರಿಂದ ನಿಸ್ಸಂದೇಹವಾಗಿ ಜ್ಞಾನದ ತಳಹದಿ ಸದೃಢಗೊಳ್ಳುತ್ತದೆ.

● **ನಮ್ಮೂರು ನೆರೆಹೊರೆಯ ಕುರಿತು ಮಕ್ಕಳೂ ತಿಳಿದಿರಲಿ.** ನಮ್ಮ ಮಕ್ಕಳು ಕೇವಲ ಶಾಲೆ ಓದಿಗಷ್ಟೇ ಸೀಮಿತವಾಗಿರದೇ ಎಲ್ಲರೊಡನೆ ಬೆರೆತು ಬದುಕುವಂತಾಗಬೇಕು. ಹಬ್ಬಹರಿದಿನ ಅಥವಾ ಮದುವೆ, ಸತ್ಯಾನಾರಾಯಣ ಪೂಜೆ ಕಾರ್ಯಕ್ರಮಗಳಿಗಷ್ಟೇ ಅಲ್ಲದೇ ಸಾಮಾನ್ಯ ದಿನಗಳಲ್ಲೂ ನಮ್ಮ ಬಂಧುಗಳು ಪರಿಚಯದವರ ಮನೆಗಳಿಗೆ ಹೋಗಿಬಂದು ಮಾಡುವ ಪರಿಪಾಠ ಇರಬೇಕು. ಆಗ ಮನೆಮನೆಗಳಲ್ಲಿ ಇರುವ ಭಿನ್ನ ಭಿನ್ನ ಪದ್ಧತಿಗಳು ಆಚರಣೆಗಳ ಪರಿಚಯ ಆಗುತ್ತದೆ. ಕೇವಲ ನಮ್ಮ ಜಾತಿಸಮುದಾಯ ಸಂಬಂಧಿಗಳಲ್ಲದೇ ಎಲ್ಲ ವೃತ್ತಿ ವರ್ಗದ ಸ್ನೇಹಿತರ ಮನೆಗಳಿಗೂ ಹೋಗಿಬರುವುದು ಇದ್ದರೆ ಬದುಕಿನ ವಿವಿಧತೆಗಳು ಗಮನಕ್ಕೆ ಬರುತ್ತವೆ. ಇಂತಹ ಭಿನ್ನತೆ ವಿವಿಧತೆಗಳನ್ನು ಎಳೆವೆಯಲ್ಲೇ ಕಂಡವನಿಗೆ ಎಲ್ಲವನ್ನು ಒಪ್ಪಿಕೊಳ್ಳುವ ಹಾಗೂ ಗೌರವಿಸುವ ಮಾನಸಿಕತೆ ತನ್ನಿಂದ ತಾನೆ ಬೆಳೆಯುತ್ತದೆ.

● **ಮೊಬೈಲ್ ಗೇಮ್‌ಗಿಂತ ಬಯಲಿನ ಆಟ ಹೆಚ್ಚು ಉಲ್ಲಾಸ ನೀಡುತ್ತದೆ.** ಮೊಬೈಲ್, ಕಂಪ್ಯೂಟರ್ ಗೇಮ್‌ಗಳು, ಕಾರ್ಟೂನ್ ಟಿವಿ ವಾಹಿನಿಗಳು ಇಂದಿನ ಪಿಡುಗೆಂದರೆ ತಪ್ಪಲ್ಲ. ಇವುಗಳ ವ್ಯಸನ ಮಕ್ಕಳ ಬೌದ್ಧಿಕ ಅಷ್ಟೇ ಅಲ್ಲ ಶಾರೀರಿಕ ಬೆಳವಣಿಗೆಯ ಮೇಲೂ ಪರಿಣಾಮ ಬೀರುತ್ತವೆ. ಬಯಲಿನ ಆಟಗಳು ಮನಸ್ಸಿಗೆ ಆಹ್ಲಾದ ನೀಡುವುದರ ಜೊತೆಗೆ ಶರೀರಕ್ಕೆ ವ್ಯಾಯಾಮವನ್ನೂ ನೀಡುತ್ತವೆ.

● **ಈಜು, ಸೈಕ್ಲಿಂಗ್, ಟ್ರೆಕ್ಕಿಂಗ್, ಓಡುವುದು** ಮೊದಲಾದ ಹವ್ಯಾಸಗಳು, ಚಿತ್ರಕಲೆ ಸಂಗೀತ ಮೊದಲಾದವು ಹೊಸ ಭಾಷೆಯನ್ನು ಕಲಿಯುವುದು ಅಥವಾ ಇನ್ನು ಯಾವುದೋ ಸದಭಿರುಚಿಯ ಹವ್ಯಾಸಗಳನ್ನು ಮಕ್ಕಳು ರೂಢಿಸಿಕೊಂಡರೆ ಅವು ಬದುಕಿಗೆ ಅಗತ್ಯವಾದ ಎಷ್ಟೋ ಸಂಗತಿಗಳನ್ನು ಪರೋಕ್ಷವಾಗಿ ಕಲಿಸುತ್ತವೆ.

ಕನ್ನಡದ ಹಿರಿಯ ಕವಿ ಜಯಂತ್ ಕಾಯ್ಕಿಣಿಯವರು ಹೇಳುವಂತೆ ಶಾಲೆಗಳಿಗೆ ಹೋಗುವ ದಾರಿಯಲ್ಲಿಯೇ ನೈಜ ಶಿಕ್ಷಣ ದೊರಕುವುದು ಎಂಬುದು ಅಕ್ಷರಶಃ ಸತ್ಯ. ಪರಿಸರವನ್ನು ಗಮನಿಸುವ ಮಾತ್ರದಿಂದಲೇ ಸಿಗುವ ಶಿಕ್ಷಣ, ಪ್ರಕೃತಿ ಕಲಿಸುವ ಪಾಠವೂ ನಮ್ಮ ಮಕ್ಕಳಿಗೆ ಸಿಗಬೇಕು.

ಒಟ್ಟಿನಲ್ಲಿ ಶಾಲಾ ಕಾಲೇಜುಗಳಲ್ಲಿ ಶಿಕ್ಷಣ ಮುಗಿಸಿದ್ದಕ್ಕೆ ಒಂದು ಪ್ರಮಾಣಪತ್ರವನ್ನು, ಚಿನ್ನದ ಪದಕವನ್ನು ಇಲಾಖೆಯವರು ನೀಡಬಹುದು. ಸರ್ಕಾರಗಳಿಂದ ಸನ್ಮಾನಗಳಾಗಬಹುದು. ಪತ್ರಿಕೆಗಳಲ್ಲಿ ಕೆಲದಿನ ಮಿಂಚಲೂಬಹುದು. ಆದರೆ ಇವೆಲ್ಲಕ್ಕೂ ಒಂದು ಪರಿಮಿತಿಯಿದೆ. ಶಾಲಾ ಓದು ಮುಗಿದ ನಂತರ ಇವನ್ನು ಯಾರು ನೆನಪಿನಲ್ಲಿಡುವುದಿಲ್ಲ. ಆದರೆ ಸುಸಂಸ್ಕಾರಗಳು, ಮೈಗೂಡಿಸಿಕೊಳ್ಳುವ ಮೌಲ್ಯಗಳು ತತ್ಕ್ಷಣಕ್ಕೆ ಯಾವುದೇ ಖ್ಯಾತಿ ಬಿರುದನ್ನು ತಂದುಕೊಡದಿದ್ದರೂ ಅರ್ಥಪೂರ್ಣ ಬದುಕನ್ನು ನಡೆಸಲು ಖಂಡಿತ ಸಮರ್ಥರನ್ನಾಗಿ ಮಾಡುತ್ತವೆ. ಸಮಾಜದ ಸುಸಂಸ್ಕೃತ ವ್ಯಕ್ತಿಯಾಗಿ ಬಾಳಲು, ದೇಶದ ಉತ್ತಮ ಪ್ರಜೆಯಾಗಿ ರೂಪಿಸಲು ಸಹಕಾರಿಯಾಗಿವೆ. ಹಾಗಾಗಿ ಶಾಲೆಗಳು ಪುನಾರಂಭಗೊಳ್ಳುವ ಈ ಹೊತ್ತಿನಲ್ಲಿ ನಮ್ಮ ಮಕ್ಕಳ ಶಿಕ್ಷಣ ಕೇವಲ ಮಾಹಿತಿ ಗಳಿಸುವ ಸಲುವಾಗಿ ಅಲ್ಲ ಮೌಲ್ಯ ಸಂಸ್ಕಾರಯುತ ವಾಗಿರುವಂತೆ ಪ್ರಯತ್ನಿಸುವುದು ಅಗತ್ಯವಾಗಿದೆ. ಏಕೆಂದರೆ ಸುಶಿಕ್ಷಿತ ಸುಸಂಸ್ಕೃತ ಮಕ್ಕಳೇ ನಾಳಿನ ಆಸ್ತಿ.

**ಕೃಪೆ : ಪುಂಗವ; ಜೂನ್ 1 ರ ಸಂಚಿಕೆ**

ದಾರಿದೀಪ

ಭಾಗ 7

# ಸ್ವಾತಂತ್ರ್ಯಪೂರ್ವ ಭಾರತದಲ್ಲಿ ಶಿಕ್ಷಣ ಸಂಸ್ಥೆಗಳ ಪಾತ್ರ ಮತ್ತು ಕಾರ್ಯ



ಭಾರತದಲ್ಲಿ ಬ್ರಿಟಿಷರೇ ಸ್ಥಾಪಿಸಿದ ಕೆಲವೇ ಕೆಲವು ಶಿಕ್ಷಣ ಸಂಸ್ಥೆಗಳಲ್ಲಿ ಪುಣೆಯ 'ಕಾಲೇಜ್ ಆಫ್ ಇಂಜಿನಿಯರಿಂಗ್' ಕೂಡ ಒಂದು. 1854 ರಲ್ಲಿಯೇ ಇದರ ಮೊದಲ ತರಗತಿಗಳು ಆರಂಭವಾದವು. ಲೋಕೋಪಯೋಗಿ ಇಲಾಖೆಯಲ್ಲಿನ ನೌಕರರಿಗೆ, ಕಟ್ಟಡ, ಆಣೆಕಟ್ಟು, ಕಾಲುವೆಗಳ ನಿರ್ಮಾಣದಂತಹ ಕೆಲಸಗಳಲ್ಲಿ ಪರಿಣತರನ್ನಾಗಿ ಮಾಡಲು ಈ ಸಂಸ್ಥೆ ಆರಂಭವಾಗಿತ್ತು. ಮೊದಲಿಗೆ 'ಪುಣೆ ಇಂಜಿನಿಯರಿಂಗ್ ಅಂಡ್ ಮೆಕ್ಯಾನಿಕಲ್ ಸ್ಕೂಲ್' ಎಂಬ ಹೆಸರಿನೊಂದಿಗೆ, ಬಂಗಲೆ ಯೊಂದರಲ್ಲಿ ಶುರುವಾದ ಸಂಸ್ಥೆ ಮುಂದೆ 1864 ರಲ್ಲಿ 'ಪೂನಾ ಸಿವಿಲ್ ಇಂಜಿನಿಯರಿಂಗ್ ಕಾಲೇಜ್' ಎಂದು ಹೊಸ ಹೆಸರಿನಿಂದ ಕಾರ್ಯೋನ್ಮುಖವಾಯಿತು.

ಆರಂಭದ ದಿನಗಳಲ್ಲಿ, ಅಂದರೆ 1857 ರ ವರ್ಷದಲ್ಲಿ, ಹೆನ್ರಿ ಕೋಕ್ ಎಂಬ ಅಧಿಕಾರಿಯು ಕಾಲೇಜಿನ ಆಡಳಿತವನ್ನು ವಹಿಸಿದ. ಆಗ, ಕಾಲೇಜಿನ ಪ್ರವೇಶಕ್ಕೆ ಎಲ್ಲರಿಗೂ ದೇಶ, ಜಾತಿಗಳ ಭೇದವಿಲ್ಲದೆ ಅನುಮತಿಯಿತ್ತು. ವಿದ್ಯಾರ್ಥಿಗಳು ಮೊದಲಿಗೆ ಪ್ರವೇಶ ಪರೀಕ್ಷೆಯನ್ನು ಬರೆಯಬೇಕಿತ್ತು. ಉತ್ತರ ಪತ್ರಿಕೆಗಳನ್ನು ಖುದ್ದಾಗಿ ಹೆನ್ರಿ ಅವರೇ ಪರೀಕ್ಷಿಸಿ ಉತ್ತಮ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತಿದ್ದರು. ಹಾಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ವಾರ್ಷಿಕವಾಗಿ 6 ರೂಪಾಯಿಗಳ ವಿದ್ಯಾರ್ಥಿ ವೇತನವನ್ನೂ ಕೊಡಲಾಗುತ್ತಿತ್ತು. ವಿದ್ಯಾರ್ಥಿಗಳ ಕಲಿಕೆಯಲ್ಲಿ ಮೆಕ್ಯಾನಿಕಲ್ ಡ್ರಾಯಿಂಗ್, ಗಣಿತಶಾಸ್ತ್ರ, ಕಟ್ಟಡ ನಿರ್ಮಾಣದಂತಹ ವಿಷಯಗಳ ಬೋಧನೆ ನಡೆಯುತ್ತಿತ್ತು.

1865 ರಲ್ಲಿ, ಈ ಸಂಸ್ಥೆ ತನ್ನದೇ ಆದ ಸ್ವಂತ ಕಟ್ಟಡವೊಂದನ್ನು ಹೊಂದುವಷ್ಟು ಬೆಳೆದಿತ್ತು. ಆಗಿನ ಗವರ್ನರ್ ಆಗಿದ್ದ, ಸರ್ ಬರ್ಟಲ್ ಫೆರ್ರೇ ಅವರೇ ಕಟ್ಟಡದ ಅಡಿಗಲ್ಲನ್ನಿಟ್ಟರು. ಮುಂದೆ ಅವರೇ ಕಾಲೇಜಿನ ಉಪ-ಕುಲಪತಿಗಳಾದರು. 1886 ರಲ್ಲಿ ಈ ಕಾಲೇಜು ಬಾಂಬೆ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಒಳಪಟ್ಟಿತು. ಹೀಗಾಗಿ ಕಾಲೇಜು ಸೇರಲು ಮೆಟ್ರಿಕ್ಯುಲೇಷನ್ ಉತ್ತೀರ್ಣತೆ ಕಡ್ಡಾಯವಾಯಿತು.

1900 ರ ನಂತರ, ಕಾಲೇಜಿನ ಪದವಿಯ ಹೆಸರನ್ನು ಬಿ.ಇ. (ಬ್ಯಾಚುಲರ್ ಆಫ್ ಇಂಜಿನಿಯರಿಂಗ್) ಎಂದು ಬದಲಾಯಿಸಿತು. ಇದಕ್ಕೂ ಮೊದಲು ಇಲ್ಲಿ ಕೇವಲ ಸಿವಿಲ್ ಇಂಜಿನಿಯರಿಂಗ್‌ಗೆ ಸಂಬಂಧಿಸಿದ ಯೋಗ್ಯತಾ ಪತ್ರವನ್ನು ಮಾತ್ರ ಕೊಡುವ ವ್ಯವಸ್ಥೆ ಇತ್ತು. ಕಾಲೇಜಿಗೆ 'ಪೂನಾ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು' ಎಂಬ ನಾಮಕರಣ ಮಾಡಲಾಯಿತು, ಮತ್ತು ಇಂಜಿನಿಯರಿಂಗ್ ಬಿಟ್ಟು ಉಳಿದ ವಿಷಯಗಳ ಬೋಧನೆಯನ್ನು ಕೈಬಿಡಲಾಯಿತು.

ಸ್ವಾತಂತ್ರ್ಯಾನಂತರದಲ್ಲಿ ಪುಣೆ ಯೂನಿವರ್ಸಿಟಿ ಆರಂಭವಾದ ಮೇಲೆ, ಈ ಪುರಾತನ ಕಾಲೇಜು, ಆ ವಿಶ್ವವಿದ್ಯಾಲಯದ ಭಾಗವಾಯಿತು. 4 ವರ್ಷ, 8 ಸೆಮಿಸ್ಟರ್‌ಗಳ ಇಂಜಿನಿಯರಿಂಗ್ ವಿಭಾಗಗಳು ಶುರುವಾದವು. 2003 ರಲ್ಲಿ ಮಹಾರಾಷ್ಟ್ರ ಸರ್ಕಾರವು ಕಾಲೇಜಿಗೆ ಸ್ವಾಯತ್ತ ಕಾಲೇಜಿನ ಸ್ಥಾನಮಾನ ನೀಡಿತು. ಹೀಗಾಗಿ ಪಠ್ಯಪುಸ್ತಕ ರಚನೆ, ಪರೀಕ್ಷೆಯ ವ್ಯವಸ್ಥೆ ಎಲ್ಲವೂ ಕಾಲೇಜಿನ ಸ್ವಂತ ನಿರ್ಧಾರದ ಮೇಲೆ ನಡೆಯಲು ಆರಂಭವಾಯಿತು.

ಈ ಶಿಕ್ಷಣ ಸಂಸ್ಥೆ ಇತಿಹಾಸದಲ್ಲಿ ಅಚ್ಚಳಿಯದೆ ಉಳಿಯಲು ಬಹುದೊಡ್ಡ ಕಾರಣವೊಂದಿದೆ. ದೇಶದ ಅನೇಕ ಆಣೆಕಟ್ಟು, ಕಾಲುವೆಗಳ ನಿರ್ಮಾಣದಲ್ಲಿ ಭಾಗಿಯಾದ ಅನೇಕ ಅಭಿಯಂತರರ ಜೊತೆಗೆ, ಈ ದೇಶ ಕಂಡ ಅತ್ಯದ್ಭುತ ಇಂಜಿನಿಯರ್, ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರು ಅಭ್ಯಾಸ ಮಾಡಿದ್ದು ಇದೆ ಪುಣೆಯ ಕಾಲೇಜಿನಲ್ಲಿ. ದೇಶದ ಪ್ರಗತಿಯ ಪಥವನ್ನೇ ಬದಲಿಸಿದವರು ಇವರು. ಜೊತೆಗೆ ಈ ದೇಶದಲ್ಲಿ ಸ್ಕೂಟರ್ ಗಳನ್ನು ಪರಿಚಯಿಸಿ ಹೆಗ್ಗಳಿಕೆ ಪಡೆದ 'ಬಜಾಜ್' ಸಂಸ್ಥೆಯ ನಿರ್ದೇಶಕರಾದ ರಾಜೀವ್ ಬಜಾಜ್ ಕೂಡ ಇದೇ ಕಾಲೇಜಿನ ವಿದ್ಯಾರ್ಥಿ. ಹೀಗೆ ದೇಶ ವಿದೇಶಗಳ ಅನೇಕ ಸಂಶೋಧನಾ ಕ್ಷೇತ್ರಗಳಲ್ಲಿ, ಉನ್ನತ ಹುದ್ದೆಗಳಲ್ಲಿ, ರಾಷ್ಟ್ರಸೇವೆಯ ಕಾರ್ಯಗಳಲ್ಲಿ ತೊಡಗಿರುವ ಅನೇಕ ಪ್ರತಿಭೆಗಳನ್ನು ಈ ಸಂಸ್ಥೆ ಕೊಡುಗೆಯಾಗಿ ನೀಡಿದೆ.


ಭೀಮಸೇನ್ ಪುರೋಹಿತ್
BE. Mtech ಇಂಜಿನಿಯರ್
ಬೆಂಗಳೂರು




Registered No. RNI 45459/85 RNP/KA/BGS-125/2015-2017 Posted at Bangalore PSO Bangalore -560 026
Date of Publishing : 17-06-2017 Date of Posting 20th or 21st of every month

# ಚಿತ್ರ ಸುದ್ದಿ : ರಾಷ್ಟ್ರೀಯ ಕಾರ್ಯಕಾರಿಣಿ



ದಿನಾಂಕ 27–5–17 ರಂದು ಶಿಮ್ಲಾದಲ್ಲಿ ನಡೆದ ಕಾರ್ಯಕಾರಿಣಿಯನ್ನು ಹಿಮಾಚಲದ ಮಾಜಿ ಮುಖ್ಯಮಂತ್ರಿಗಳಾದ ಪ್ರೇಮ್‌ಕುಮಾರ್ ಧುಮಾಲ್‌ರವರು ಉದ್ಘಾಟಿಸುತ್ತಿರುವುದು.



ಕಾರ್ಯಕಾರಿಣಿಯಲ್ಲಿ ಕರ್ನಾಟಕ ರಾಜ್ಯ ಮಹಾವಿದ್ಯಾಲಯ ಸಂಘವು ಹೊರತರುತ್ತಿರುವ ಹೊಸ ಪತ್ರಿಕೆಯ ಮೊದಲ ಸಂಚಿಕೆಯ ಉದ್ಘಾಟನೆ.




ರಾಷ್ಟ್ರೀಯ ಶೈಕ್ಷಿಕ ಮಹಾಸಂಘದ ಕಾರ್ಯಕಾರಿಣಿಯಲ್ಲಿ ಕರ್ನಾಟಕದ ತಂಡ.



ಶಿಮ್ಲಾ ಕಾರ್ಯಕಾರಿಣಿಯಲ್ಲಿ ಭಾಗವಹಿಸಿದ ವಿವಿಧ ರಾಜ್ಯಗಳ ಪ್ರತಿನಿಧಿಗಳು

**ಗಮನಿಸಿ**

ಶಿಕ್ಷಕ ಸಮಾಚಾರಕ್ಕೆ ಕಾರ್ಯಕ್ರಮ ಮತ್ತು ಚಿತ್ರದ ವರದಿಗಳನ್ನು, ಕಾರ್ಯಕ್ರಮ ನಡೆಸಿದ ತಕ್ಷಣವೇ ಕಳುಹಿಸಿ ಕೊಡಿ. ನಿಮ್ಮ ಯಾವುದೇ ಬರಹಗಳು, ವರದಿಗಳನ್ನು 'ನುಡಿ'ಯಲ್ಲಿ ಕಂಪೋಸಿಂಗ್ ಮಾಡಿ ಫೋಟೋ ಸಹಿತ ಪ್ರತಿ ತಿಂಗಳು 5 ನೇ ತಾರೀಖಿನೊಳಗೆ **akss1950@gmail.com** ಇ–ಮೇಲ್‌ಗೆ ಕಳುಹಿಸಿಕೊಡಿ.

IF UNDELIVERED
PLEASE RETURN TO SENDER

Published for K.S.S.T.A. by K. Narahari
# 55, Yadavasmruthi, 1st Main, Sheshadripuram
Bangalore-560020. ✆ : 080-23466495
Printed at : RASHTROTTHANA MUDRANALAYA
Bangalore - 560 019.

**ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ**

D.P.I. (Special) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20–6–1980ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲು ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು

srushtidesigns@gmail.com